ಶ್ರೀ ವಾಟಾಳ್ ನಾಗರಾಜ್ : – ಮಾನ್ಯ ಮುಖ್ಯಮಂತ್ರಿಗಳೇನು ಹೇಳಿದರು ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನನಗೆ 4 ಬಾರಿ ಪ್ರಾಣ ಭಯ ಒಡ್ಡಿದ್ದಾರೆಂದು ಹೇಳಿದ್ದಾರೆ ಅಂದರೆ ಏನು ಅರ್ಥ. 1 2 3 ಬೇರೆ ಕಡೆ 4ನೇ ಬಾರಿ ಎಲ್ಲಿ ಅದು ಹೇಳಬೇಕು. ಈ ಸದನದಲ್ಲಿ ಹೇಳಿದರು 4ನೇ ಬಾರಿ ಅಂದರೆ ಎಲ್ಲಿ ಎನ್ನುವುದು ನನಗೆ ಅರ್ಥವಾಗಬೇಕು. 4ನೇ ಬಾರಿ ಎಲ್ಲಿ ಅವರಿಗೆ ಪ್ರಾಣ ಭಯ ಬಂತು ಅದನ್ನು ಹೇಳಬೇಕು. ಅದು ಕಡತದಲ್ಲಿ ಹೋಗಿದೆ. ಮಾನ್ಯ ಉಪ ಮುಖ್ಯ ಮಂತ್ರಿಗಳು ತಾವು ಚೆನ್ನಾಗಿ ವ್ಯಾಖ್ಯಾನ ಮಾಡುತ್ತೀರಿ ತಾವು ಹೇಳಿ. 4ನೆಯದು ಎಲ್ಲಿ ನಡೆಯಿತು ಅದನ್ನು ಹೇಳಲಿ. ನಿಮ್ಮ ಬಗ್ಗೆ ನನಗೆ ಬಹಳ ಗೌರವವಿತ್ತು, ಈ ರೀತಿ ಸದನಕ್ಕೆ ಸುಳ್ಳು ಹೇಳುವುದು ನೋಡಿದರೆ ನನಗೆ ಅತ್ಯಂತ ಖೇದವೆನಿಸುತ್ತದೆ. ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಇಂತಹ ಸರಕಾರವಿರುವ ಬದಲು, ಇವೆರಡೂ ಗುಂಪು ಕಿತ್ತಾಡಿ ರಾಜ್ಯದ ಆಡಳಿತವನ್ನು ಮೂಲೆ ಗುಂಪು ಮಾಡಿದ್ದೀರಿ, ಆಡಳಿತ ದಿವಾಳಿಯಾಗಿದೆ. ನಾವು ಬೇಕಾದರೆ ಈ ಸದನದಲ್ಲೆ ರಾಜ್ಯಪಾಲರನ್ನು, ರಾಷ್ಟ್ರಪತಿಯವರನ್ನು ಒತ್ತಾಯ ಮಾಡುತ್ತೇವೆ. ಈ ಸರಕಾರವನ್ನು ವಜಾ ಮಾಡಿ ಎಂದು ಹೇಳುತ್ತಿದ್ದೇವೆ. ಸಂಪೂರ್ಣ ರಾಷ್ಟ್ರಪತಿ ಆಳ್ವಿಕೆ ಬರಲಿ ಎಂದು ಒತ್ತಾಯ ಮಾಡಿ, ಆ ಒತ್ತಾಯಕ್ಕೆ ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಎ.ಕೆ.ಅನಂತ ಕೃಷ್ಣ : – ನನಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು. ಅಲ್ಲಿ ಏನು ನಡೆಯಿತು ಎಂದು.....

ಅಧ್ಯಕ್ಷರು : – ಆ ಚರ್ಚೆಗೆ ಅವಕಾಶ ಇಲ್ಲ. ತಾವು ಕುಳಿತುಕೊಳ್ಳಿ.

ಕಾವೇರಿ ನದಿ ನೀರಿನ ವಿವಾದ ಕುರಿತು ಚರ್ಚೆ

(ಮುಂದುವರಿದ ಚರ್ಚೆ).

ಶ್ರೀ ವೈ.ಕೆ.ರಾಮಯ್ಯ : – ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಈ ಒಂದು ಪರಿಸ್ಥಿತಿಯಿರುವಾಗ ಈ ವಾತಾವರಣದಲ್ಲಿ ಈ ರಾಜ್ಯದ ಅಭಿವೃದ್ಧಿಯ ಅತ್ಯಂತ ಪ್ರಮುಖ ವಿಷಯದ ಬಗ್ಗೆ ಮಾತನಾಡುವಾಗ ಅದನ್ನು ಯಾರಾದರೂ ಕೇಳುವವರಿದ್ದಾರೆಯೇ? ಕೇಳಿ ಅನುಷ್ಠಾನಕ್ಕೆ ತರುವಂತಹ ಪರಿಸ್ಥಿತಿ ಇದೆಯೇ ಎಂದು ನನಗೆ ಅನುಮಾನ ಬಂದಿದೆ. ಅದು ಏನಾದರೂ ಆಗಿಕೊಂಡು ಹೋಗಲಿ. ನನ್ನ ಸ್ನೇಹಿತರು ಮಂತ್ರಿಮಂಡಲ ಇದೆಯೆಂದು ಭಾವಿಸಿಕೊಳ್ಳಿ ಎಂದು ಹೇಳಿದರು. ಮಂತ್ರಿಮಂಡಲವಿದೆ ಎಂದು ಭಾವಿಸಿಕೊಂಡು ಕಾವೇರಿ ನೀರಿನ ಹಂಚಿಕೆ ವಿಷಯದಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದೆ. ಆದರೆ ಅನ್ಯಾಯವಾಗಲಿಕ್ಕೆ ನಮ್ಮಲ್ಲಿ ನ್ಯಾಯವಿದೆಯೇ? ತಮಿಳುನಾಡಿಗೂ ಕರ್ನಾಟಕಕ್ಕೂ ಇರುವಂತಹ ಈ ವಿವಾದದಲ್ಲಿ ಕರ್ನಾಟಕದವರದ್ದೇ ತಪ್ಪೇನೋ. ಪಾಪ ಕರ್ನಾಟಕದವರು ತಮಿಳುನಾಡಿನ ಬೆಳೆಗಾರರಿಗೆ ನೀರು ಬಿಟ್ಟು ಕೊಡುತ್ತಿಲ್ಲ ಅವರಿಗೆ ಅನ್ಯಾಯ ಮಾಡುತ್ತಿದ್ದಾರೆನ್ನುವುದು ರಾಷ್ಟ್ರ ಮಟ್ಟದಲ್ಲಿ ಪ್ರಚಾರ ನಡೆಯುತ್ತಿದೆ. ನಾನು ವಿಧಿಯಿಲ್ಲದೆ ಹೇಳಬೇಕಾಗುತ್ತದೆ, ಇದು ಪ್ರಚಾರ ಅಲ್ಲ, ಅಪಪ್ರಚಾರ ಎಂದು. ಹೇಗೆ ಅಪಪ್ರಚಾರ ಎಂದರೆ, ಅದಕ್ಕೆ

4.05 ಪಿ.ಎಂ

ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಈ ವರ್ಷ ನಮಗೆ ನೀರನ್ನು ಬಿಟ್ಟು ಕೊಡಬೇಕೆಂದು ತಮಿಳ್ನಾಡಿನವರು ಒಂದು ಪ್ರಸ್ತಾವನೆಯನ್ನು ನಮ್ಮ ಕರ್ನಾಟಕ ಸರ್ಕಾರದ ಮುಂದೆ ತಂದರು. ಅವರ ಬೇಡಿಕೆ ಏನೆಂದರೆ, ನಮ್ಮ ಕುರುವೈ ಬೆಳೆಯೆಲ್ಲಾ ಒಣಗಿ ಹೋಗುತ್ತಿದೆ; ಆ ಬೆಳೆಗೆ ನೀರನ್ನು ಬಿಟ್ಟುಕೊಡಬೇಕೆಂಬ ವಾದವನ್ನು ಮುಂದಿಟ್ಟು ಅವರು ನಮ್ಮ ಕರ್ನಾಟಕ ರಾಜ್ಯಕ್ಕೆ ಒಂದು

ಬೇಡಿಕೆಯನ್ನು ಸಲ್ಲಿಸಿದರು. ಪ್ರತಿವರ್ಷ ಈ ಪ್ರದೇಶದಲ್ಲಿ ಇಡುತ್ತಿದ್ದ ಬೆಳೆ 1.67 ಲಕ್ಷ ಎಕರೆಗೆ. ಆದರೆ ತಮಿಳ್ನಾಡಿನ ಸರ್ಕಾರ ಅವರ ರೈತರ ಮುಖಾಂತರ ಈ ವರ್ಷ ಬೆಳೆ ಇಟ್ಟಿರತಕ್ಕ ಪ್ರದೇಶ ಎಂದರೆ 2.67 ಲಕ್ಷ ಎಕರೆ. ಅಂದರೆ ಪ್ರತಿವರ್ಷ ಅವರು ಎಷ್ಟು ಎಕರೆ ಪ್ರದೇಶದಲ್ಲಿ ವ್ಯವಸಾಯ ಮಾಡುತ್ತಿದ್ದರೋ ಅದಕ್ಕಿಂತ ಒಂದು ಲಕ್ಷ ಎಕರೆ ಪ್ರದೇಶದಲ್ಲಿ ಬೆಳೆ ಇಟ್ಟಿದ್ದಾರೆ. ಆದ್ದರಿಂದ ಮಾಮೂಲಿ ಹೋಗುತ್ತಿದ್ದ ನೀರಿಗಿಂತ ಹೆಚ್ಚಿನ ನೀರಿನ ಅವಶ್ಯಕತೆ ಇರತಕ್ಕದ್ದು ನಿಜ ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಈ ಅಂಕಿಅಂಶ ಮತ್ತು ಮಾಹಿತಿಗಳಿರಡನ್ನೂ ನಾನು ಸೃಷ್ಟಿಮಾಡಿ ಕೊಡುತ್ತಿರುವುದಲ್ಲ. ತಮಿಳ್ನಾಡಿನ ವ್ಯವಸಾಯ ಇಲಾಖೆಯ ಅಧಿಕೃತ ಪ್ರಕಟಣೆಯಲ್ಲಿ ಇದು ಬಂದಿದೆ. 1.67 ಲಕ್ಷ ಎಕರೆಗೆ ಬದಲಾಗಿ 2.67 ಲಕ್ಷ ಎಕರೆ ಪ್ರದೇಶದಲ್ಲಿ ಬೆಳೆಯನ್ನು ಇಟ್ಟಿದ್ದಾರೆ. ಆದುದರಿಂದ ತಮಿಳುನಾಡಿನವರು ಹೆಚ್ಚಿನ ನೀರನ್ನು ಕೇಳುವುದಕ್ಕೆ ಅವರಿಗೆ ಮೊದಲನೆಯದಾಗಿ ಅಧಿಕಾರವೇ ಇಲ್ಲ. ಮತ್ತು ಹೆಚ್ಚುವರಿ ನೀರನ್ನು ಬಿಟ್ಟುಕೊಡುವ ಅವಶ್ಯಕತೆ ನಮ್ಮ ಸರ್ಕಾರಕ್ಕೆ ಬರುವುದಿಲ್ಲ. ಆದರೆ ದುರದೃಷ್ಟವಶಾತ್ ಹೇಳುವುದಾದರೆ, ನಮಗೆ ಎಲ್ಲವೂ ಕೂಡ ವಿರೋಧವಾಗಿದೆ. ಆಡಳಿತವನ್ನು ನಡೆಸುತ್ತಿರುವ ಈ ಸರ್ಕಾರಕ್ಕೆ ಇವರದ್ದೇ ಪಕ್ಷದ ಸರ್ಕಾರ ದೆಹಲಿಯಲ್ಲಿರುವುದರಿಂದ ಅವರನ್ನು ಸುಪ್ರೀತರನ್ನಾಗಿ ಮಾಡುವಂಥ ಜವಾಬ್ದಾರಿ ಕೂಡ ಇವರಿಗಿದೆ. ಬಹುಶಃ ಆ ಒಂದು ಆಬ್ಲಿಗೇಷನ್ ಕೂಡ ಇದೆ ಎಂದು ನಾನು ಭಾವಿಸುತ್ತೇನೆ. ಈ ಕಾರಣಕ್ಕೋ ಅಥವಾ ಬೇರೆ ಕಾರಣಕ್ಕೋ ನಮ್ಮ ಕೆ.ಆರ್.ಎಸ್.ನಿಂದ ತಮಿಳ್ನಾಡಿಗೆ ಈ ಸರ್ಕಾರದವರು ನೀರನ್ನು ಬಿಟ್ಟುಕೊಟ್ಟಿದ್ದಾರೆ. ಅನ್ಯಾಯದ ಪರಂಪರೆಗೆ ಕೇವಲ ಹೊರಗಿನವರು ಮಾತ್ರ ಕಾರಣವಲ್ಲ. ಮೋಸದ ಕೃತ್ಯಕ್ಕೆ ಕೇವಲ ತಮಿಳ್ನಾಡಿನವರು ಮಾತ್ರ ಕಾರಣವಲ್ಲ. ನಮ್ಮವರೂ ಕೂಡ ಅಷ್ಟೇ ಕಾರಣವಾಗಿದ್ದಾರೆ. ನ್ಯಾಯ ನಮ್ಮದಾಗಿದೆ ಎಂಬುದಕ್ಕೆ ನೀರಿನ ಹಂಚಿಕೆ ವಿಷಯದಲ್ಲಿ ನಾವು ಪರಿಗಣಿಸಬೇಕಾದ ವಿಷಯ ಏನೆಂದರೆ, ಕಾವೇರಿ ಪ್ರದೇಶದ ನೀರಾವರಿ ಲಭ್ಯತೆ ಎಷ್ಟಿದೆ? ಈ ಪರಿಸ್ಥಿತಿಯಲ್ಲಿ ಈ ರಾಜ್ಯದ ಜನರ ಹಿತವನ್ನು ಕಾಪಾಡುವಂಥ ಒಂದು ಪ್ರಜಾತಂತ್ರ ವ್ಯವಸ್ಥೆಯ ಸರ್ಕಾರ ಇದ್ದೀತೇ? ಇದನ್ನು ನಾನು ನಂಬಿಕೊಳ್ಳಬೇಕೇ?ನಂಬಿಕೊಂಡು ಕಂಠ ಶೋಷಣೆ ಮಾಡಿಕೊಳ್ಳಬೇಕೆ? ದಯವಿಟ್ಟು ನನಗೆ ತಾವು ಅಪ್ಪಣೆ ಕೊಡಿ.

In the changed circumstances is there anybody who cares for safeguarding the interest of the State.. ಇದರಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಆಸಕ್ತಿ ಇಲ್ಲ. ನಾನು ನೇರವಾಗಿ ಅವರ ಮೇಲೆ ಆಪಾದನೆ ಮಾಡುತ್ತೇನೆ. ಅವರು ಇಲ್ಲಿ ಕುಳಿತುಕೊಳ್ಳಬೇಕಾಗಿತ್ತು. ನಾನು ದೊಡ್ಡ ಆಪಾದನೆ ಮಾಡುತ್ತಿದ್ದೇನೆ. ಈ ರಾಜ್ಯದ ಮುಖ್ಯ ಮಂತ್ರಿಗಳಿಗೆ ಸಮುದ್ರದ ಉಪ್ಪು ನೀರಿನ ಬಗ್ಗೆ ಇರುವಷ್ಟು ಆಸಕ್ತಿ ಈ ಎರಡು ನದಿ ನೀರಿನ ಬಗ್ಗೆ ಇಲ್ಲ. ಉಪ್ಪು ನೀರಿನ ಮೀನುಗಾರರ ಬಗ್ಗೆ ಇರುವಂಥ ಆಸಕ್ತಿ ಈ ಎರಡೂ ಕಣ್ಣುಗಳನ್ನು ರಕ್ಷಣೆ ಮಾಡುವ ಬಗ್ಗೆ ಇಲ್ಲ. ನಾನು ಇವತ್ತು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಕೇವಲ ಆಸಕ್ತಿ ಮಾತ್ರ ಅಲ್ಲ. ಇವರ ಪ್ರಾಮಾಣಿಕತೆಯನ್ನು ನಾನು ಪ್ರಶ್ನೆ ಮಾಡಬೇಕಾಗಿದೆ. ನಾನು ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲ ವಿಷಯದಲ್ಲೂ ಎಲ್ಲ ಕಾಲದಲ್ಲೂ ಎಲ್ಲರನ್ನೂ ಇವರು ಮೋಸಮಾಡುವುದಕ್ಕೆ ಸಾಧ್ಯವಿಲ್ಲ. ಕಾವೇರಿ, ಕೃಷ್ಣಾ ನದಿಗಳ ನೀರಿನ ಬಳಕೆಯ ಬಗ್ಗೆ, ಅದನ್ನು ಉಳಿಸಿಕೊಳ್ಳುವ ಬಗ್ಗೆ ಈ ಮುಖ್ಯ ಮಂತ್ರಿಗಳ ಪ್ರಾಮಾಣಿಕತೆಯನ್ನು ನಾನು ಪ್ರಶ್ನೆ ಮಾಡುತ್ತಿದ್ದೇನೆ. ಜನರು ಹೊರಗಡೆ ಏನು ಮಾತನಾಡುತ್ತಿದ್ದಾರೆ ಅದನ್ನು ನಾನು ಹೇಳುವುದಿಲ್ಲ. ಕಾವೇರಿ, ಕೃಷ್ಣಾಕ್ಕೆ ದುಡ್ಡು ಕೊಟ್ಟರೆ, ಅಲ್ಲಿ

ನೀರಾವರಿಯಾದರೆ ಯಾವುದೋ ಒಂದು ವರ್ಗದ ಜನರಿಗೆ ಅನುಕೂಲವಾಗುತ್ತದೆಂಬ ರಾಜಕೀಯ ಹಿನ್ನೆಲೆ ಕೂಡ ಇದೆ ಎಂದು ಜನರು ಹೇಳುತ್ತಿದ್ದಾರೆ. ಈ ಕರ್ನಾಟಕದ ರಾಜಕೀಯಕ್ಕೆ ನಾನೇನೂ ಹೊಸಬನಲ್ಲ. ನಾನು ಈ ಮನೆಗೆ ಬಂದು 10 ವರ್ಷ ಆಯಿತು. ನಾನೇನೂ ಹಸುಕೂಸಲ್ಲ ನಾನು ಎಲ್ಲವನ್ನೂ ನೋಡುತ್ತಿದ್ದೇನೆ. ಕೃಷ್ಣಾ ಕಾವೇರಿ ಯೋಜನೆಗಳನ್ನು ಅನುಷ್ಠಾನ ಮಾಡುವುದರಿಂದ ಕೇವಲ ಒಂದು ವರ್ಗದ ಜನರಿಗೆ ಮಾತ್ರ ಅನುಕೂಲ ಆಗುತ್ತದೆಂಬ ಅಭಿಪ್ರಾಯವನ್ನು ಇಟ್ಟುಕೊಂಡು ರಾಜಕೀಯವನ್ನು ಮಾಡುವಂಥ ರಾಜಕಾರಣವೂ ಇದರಲ್ಲಿದೆ. ಬಹುಶಃ ಇದು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೊರತಾಗಿಲ್ಲವೆಂದು ನಾನು ಭಾವಿಸುತ್ತೇನೆ. ಏಕೆಂದರೆ ತಾ : 30-12-92ರ ಒಂದು ಪತ್ರ ನನ್ನ ಹತ್ತಿರ ಇದೆ. ನಾನು ಅವರಿಗೆ ಕೊಟ್ಟಿರತಕ್ಕ ಪ್ರತಿಯೊಂದು ಕಾಗದಕ್ಕೂ ಅವರಿಂದ ಸ್ವೀಕರಣಾ ಪತ್ರವನ್ನು ಇಟ್ಟುಕೊಂಡಿದ್ದೇನೆ. ಇಂಥ ಒಂದು ಸಂದರ್ಭ ಇವತ್ತಲ್ಲಾ ನಾಳೆ ಬಂದೇ ಬರುತ್ತದೆಂದು ನಾನು ತಿಳಿದುಕೊಂಡಿದ್ದೆ. ನನ್ನ ಯಾವುದೇ ಒಂದು ಕಾಗದಕ್ಕೂ ಅವರು ಉತ್ತರವನ್ನು ಕೊಟ್ಟಿಲ್ಲ. ಏತಕ್ಕೆ ಸ್ವಾಮಿ? ಒಬ್ಬ ಶಾಸಕನನ್ನು ಭಿನ್ನಮತೀಯ ಗುಂಪಿನಿಂದ ಇವರ ಗುಂಪಿಗೆ ಎಳೆದುಕೊಳ್ಳುವುದಕ್ಕೆ ರಾಜ್ಯದ ಹೆಲಿಕ್ಯಾಪ್ಟರ್ ಇಟ್ಟುಕೊಂಡು ಅವರ ಮನೆಯ ಮದುವೆಗೆ ಹೋಗುತ್ತಾರೆ. ಆದರೆ ಕಾವೇರಿ, ಕೃಷ್ಣನದಿ ನೀರಿನ ಬಗ್ಗೆ ಪತ್ರ ಬರೆದರೆ ಉತ್ತರ ಬರೆಯುವಷ್ಟು ವ್ಯವಧಾನವಾಗಲಿ, ಆಸಕ್ತಿ, ಪ್ರಾಮಾಣಿಕತೆಯಾಗಲಿ ಈ ಮುಖ್ಯಮಂತ್ರಿಗಳಿಗೆ ಇಲ್ಲ. ಮಾನ್ಯ ಮುಖ್ಯಮಂತ್ರಿಯವರು ನದಿ ನೀರಿನ ಬಳಕೆಯ ಬಗ್ಗೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿಲ್ಲ. ಯಾವುದೇ ದೃಷ್ಟಿಯಿಂದ ನೋಡಿದಾಗಲೂ ಕಾವೇರಿ ನೀರಿನ ಹಕ್ಕಿನ ಬಗ್ಗೆ, ಅದರಲ್ಲಿ ನಮಗೆ ದಕ್ಕಬೇಕಾದಂತಹ ಪ್ರಮಾಣದ ಬಗ್ಗೆ ಕರ್ನಾಟಕದ ವಾದ ಏನಿದೆ, ನಿಲುವು ಏನಿದೆ, ಅದು ನ್ಯಾಯ ಸಮ್ಮತವಾದುದಾಗಿದೆ. ನ್ಯಾಯ ಸಮ್ಮತವಾದ ನಿಲುವು ಮತ್ತು ವಾದವನ್ನು ಪುಷ್ಟೀಕರಿಸಿ ರಾಜ್ಯದ ಜನರ ಹಿತವನ್ನು ಕಾಪಾಡುವುದರಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ನನ್ನ ಭಾವನೆ. ಈ ರಾಜ್ಯದಲ್ಲಿರತಕ್ಕಂಥ ಇರಿಗೇಷನ್ ಪೊಟೆನ್ಸಿಯಾಲಿಟಿ, ನೀರಾವರಿ ಲಭ್ಯತೆ 55ಲಕ್ಷ ಹೆಕ್ಟೇರ್ಸ್. ಆದರಲ್ಲಿ 40 ವರ್ಷಗಳ ನಮ್ಮ ಎಲ್ಲಾ ಸರ್ಕಾರಗಳು ಸೇರಿಕೊಂಡು ನಾವು ಸೃಷ್ಟಿ ಮಾಡಿರುವಂಥದ್ದು, ಸೃಜಿಸಿರುವಂಥದ್ದು ನೀರಾವರಿ ಬಳಸಿಕೊಂಡಿರುವುದು ಕೇವಲ 22 ಲಕ್ಷ ಹೆಕ್ಟೇರ್ಸ್ ಮಾತ್ರ. ಆಂದರೆ ನಮಗೆ ಲಭ್ಯವಿರುವ 55ಲಕ್ಷ ಹೆಕ್ಟೇರ್ ನೀರಾವರಿ ಸಾಮರ್ಥ್ಯದಲ್ಲಿ ನಾವು ಬಳಸಿಕೊಂಡಿರುವುದು ಕೇವಲ 22ಲಕ್ಷ ಹೆಕ್ಟೇರ್ಸ್‌ಮಾತ್ರ. ನನಗೆ ತಿಳಿದಿರುವ ಮಾಹಿತಿಯ ಪ್ರಕಾರ, ಇದು ರಾಜ್ಯದ ದುರಾದೃಷ್ಟ ರಾಷ್ಟ್ರದ ಶೇಕಡವಾರು ನೀರಾವರಿಯ ಜಮೀನು ಶೇ. 32ರಷ್ಟು. ಬೆಳಿಗ್ಗೆ ನಮ್ಮ ಸ್ನೇಹಿತರು ಇದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿಲ್ಲವೆಂದು ಹೇಗೆ ಹೇಳುತ್ತೀರಿ ಎಂದು ಕೇಳಿದರು. ಕರ್ನಾಟಕದ ನೀರಾವರಿಯ ಶೇಕಡವಾರು 1990ರಲ್ಲಿ 13.8 ಇದ್ದು ಇವತ್ತು 14.36-ಎಂದರೆ ನಾನು ಇದ್ದಂತಹ ಸರ್ಕಾರವು ಸೇರಿ ನಾವೆಲ್ಲ ನಾಚಿಕೆ ಪಡಬೇಕಾಗಿದೆ. ಒಂದು ದಶಕದಲ್ಲಿ ನಾವು ಸೃಜಿಸಿದಂತಹ ನೀರಾವರಿ ಸಾಮರ್ಥ್ಯ ಒಂದೇ ಒಂದು ಪರ್ಸೆಂಟ್. It was 13.8 in 1980 and now it is 14.36 in 1993. In the entire ten years, the potential used in Karnataka is only one percent. ಇದು ಸಾಧನೆ ಏನು? ಇದನ್ನು ತಮ್ಮ ಗಮನಕ್ಕೂ ಸರ್ಕಾರದ ಗಮನಕ್ಕೂ, ಏತಕ್ಕೆ ತರುತ್ತಿದ್ದೇನೆ ಎಂದರೆ ನೀವು 11ಲಕ್ಷ ಎಕರೆಗಿಂತ ಜಾಸ್ತಿ ನೀರಾವರಿ ಮಾಡಬಾರದು ಎನ್ನತಕ್ಕಂಥ ಕತ್ತಿಯನ್ನು ನಮ್ಮ ತಲೆಯ ಮೇಲೆ ತೂಗುಹಾಕಿರುವಂತಹ ಗಂಭೀರವಾದಂತಹ ಪರಿಸ್ಥಿತಿ ಇದ್ದರೂ, ವಿಶೇಷವಾದ ಸನ್ನಿವೇಶವಿರುವಾಗಲೂ ಈ ಸರ್ಕಾರಗಳು ಮಾಡಿರುವಂತಹ ಮಹತ್ ಸಾಧನೆ ಏನು ಎಂದರೆ, ಒಂದು

ದಶಕದಲ್ಲಿ ಒಂದೇ ಒಂದು ಪರ್ಸೆಂಟ್ ನೀರಾವರಿ ಹೆಚ್ಚು ಮಾಡಿರುವುದು. ಇದು ಸರ್ಕಾರದ ವಿಫಲತೆಯಲ್ಲವೇನು? ನೀರಾವರಿಯ ವಿಷಯದಲ್ಲಿ ಎಷ್ಟು ಆದ್ಯತೆ ಕೊಡಬೇಕಾಗಿತ್ತೊ, ಅಷ್ಟು ಇವರು ಕೊಟ್ಟಿಲ್ಲ, ಯಾವುದರಲ್ಲೂ ಕೊಟ್ಟಿಲ್ಲ. ನಾನು ಬೆಳಿಗ್ಗೆ ಒಟ್ಟಾರೆ ಸರ್ಕಾರದವರು ಕೊಡಬೇಕಾದ ಬಿಲ್ಲಿನ ಬಗ್ಗೆ ಹೇಳಿದೆ. ನೀವು ಇದನ್ನು ಇಲ್ಲಿ ಹೇಳಬೇಡಿ, ಪೇಪರ್‌ಗಳಲ್ಲಿ ಬರುತ್ತದೆ, ತಮಿಳುನಾಡಿನವರಿಗೆ ಗೊತ್ತಾಗುತ್ತದೆ ಎಂದು ಮೊದಲಿನಿಂದಲೂ ಅಂದರೆ 10ವರ್ಷಗಳಿಂದಲೂ ನಮಗೆ ಹೇಳಿಕೊಂಡು ಬರುತ್ತಿದ್ದಾರೆ. ಆದರೆ ವಿಧಿ ಇಲ್ಲ ಇವತ್ತು ಇದನ್ನು ಹೇಳುತ್ತಿದ್ದೇನೆ. ಸುಮಾರು ಒಂದೆರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಡೀಪ್ ಕಟ್ ಚಾನಲ್ ತೆಗೆದರೆ ತುಮಕೂರು ಜಿಲ್ಲೆಯ 4ಲಕ್ಷ ಎಕರೆ ನೀರಾವರಿಯಾಗುತ್ತದೆ. ಈ ಕೆಲಸಕ್ಕೆ ಕೊಡಬೇಕಾದಂತಹ 31ಕೋಟಿ ರೂಪಾಯಿಗಳ ಬಿಲ್ಲನ್ನು ಕೊಟ್ಟಿಲ್ಲ. Let the Irrigation Minister ascertain himself whether I am telling truth or not? If I am not telling the truth, let him dispute. 30ಕೋಟಿ ರೂಪಾಯಿಗಳನ್ನು ಇವತ್ತು ಆ ಗುತ್ತಿಗೆದಾರರಿಗೆ ಬಾಕಿಯನ್ನು ಕೊಡಬೇಕಾಗಿದೆ. ಬೆಳಿಗ್ಗೆ ಶ್ರೀ ಚಂದ್ರೇಗೌಡರು ಸುಪ್ರೀಂ ಕೋರ್ಟ್ ಮಾಡಿರುವಂತಹ ತೀರ್ಮಾನದಿಂದ ನಮಗೆ ಅನ್ಯಾಯವಾಗಿದೆ, ಮೋಸವಾಗಿದೆ, ಇದಕ್ಕೆ ಪರಿಹಾರವೇನು ಎಂದು ಕೇಳಿದರು ಅದಕ್ಕೆ ಪರಿಹಾರವನ್ನು ನಾನು ಹೇಳಬೇಕಾಗಿಲ್ಲ. ಈ ರಾಜ್ಯದ ಸಾಮಾನ್ಯ ಜನರು ಹೇಳಿದ್ದಾರೆ, ಎಲ್ಲಕ್ಕಿಂತ ಹೆಚ್ಚಾಗಿ ಈ ರಾಜ್ಯದಲ್ಲಿ 62ನೇ ಕನ್ನಡ ಸಾಹಿತ್ಯ ಸಮ್ಮೇಳನ ಕೊಪ್ಪಳದಲ್ಲಿ ನಡೆಯಿತು. ಆ ಸಮ್ಮೇಳನದಲ್ಲಿ ಒಂದು ತೀರ್ಮಾನ ಮಾಡಿದ್ದಾರೆ, ಬಹುಶಃ ಅದನ್ನು ಹೇಳಿದರೆ ಇವರ್ಯಾರಿಗೂ ಸಿಟ್ಟು ಬರುವುದಿಲ್ಲ, ಏಕೆಂದರೆ ಇದನ್ನು ನಾವು ಹೇಳುತ್ತಿಲ್ಲ. ನಾವು ಹೇಳಿದರೆ You are taking politics out of everything ಎಂದು ಹೇಳುತ್ತಾರೆ.

ಈ ಮಾತನ್ನು ನಾನು ಹೇಳುತ್ತಾ ಇಲ್ಲ. ಆ ಸಮ್ಮೇಳನದಲ್ಲಿ ಒಂದು ತೀರ್ಮಾನ ಮಾಡಿದ್ದಾರೆ. ಕರ್ನಾಟಕದ ನೆಲ ಜಲ, ಭಾಷೆ, ಸಂಸ್ಕೃತಿಗಳಿಗೆ ಎದುರಾಗಿರುವ ಎಲ್ಲಾ ಬಗೆಯ ಆಭಾಸ, ಅಪಾಯ ಆತಂಕದ ಮೂಲ ಕಾರಣ ಬೆನ್ನು ಹುರಿ ಇಲ್ಲದ ರಾಜ್ಯದ ರಾಜಕಾರಣ ಮತ್ತು ರಾಜಕಾರಣಿಗಳು ಎಂಬ ನೇರ ಹಾಗೂ ನಿಷ್ಠೂರವಾದ ತೀರ್ಮಾನಕ್ಕೆ ಇಲ್ಲಿ ನಡೆದಿರುವ 62ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬಂದಿದೆ. ಅಂದರೆ ಈ 40ವರ್ಷಗಳಲ್ಲಿ ಕರ್ನಾಟಕದಲ್ಲಿ ಇರುವಂತಹ 55 ಲಕ್ಷ ಹೆಕ್ಟೇರ್ ನೀರಾವರಿ ಸಾಮರ್ಥ್ಯವನ್ನು ಬಳಸಿಕೊಳ್ಳುವುದಕ್ಕೆ ಆಗದೇ ಹೋದಂತಹ ಅಸಾಮರ್ಥ್ಯತೆ, ಅಸಡ್ಡೆ, ಅಲಕ್ಷ್ಯ, ಅವಿವೇಕತನ, ಮೋಸ, ದ್ರೋಹ ಇವೆಲ್ಲದಕ್ಕೂ ಕೂಡ ಈ ಬೆನ್ನು ಹುರಿ ಇಲ್ಲದ ರಾಜಕಾರಣಿಗಳು ಕಾರಣ ಎಂದು ರಾಜಕಾರಣಿಗಳಾದಂತಹ ನಾವು ಹೇಳುತ್ತಾ ಇಲ್ಲ. ಈ ರಾಜ್ಯದ 62ನೇ ಸಾಹಿತ್ಯ ಸಮ್ಮೇಳನ ತೀರ್ಮಾನ ಮಾಡಿದೆ. ಅದಕ್ಕೆ ನಾನು ಬೆಳಿಗ್ಗೆ ಹೇಳಿದ್ದು ; ಇಂತಹ ಒಂದು ಸಂದರ್ಭ ಬಂದಾಗ ಸ್ವಲ್ಪ ಗಂಡಸುತನ ಇರುವ ಸರ್ಕಾರ ಬೇಕಾಗುತ್ತದೆ; ದೃಢವಾದ ಸರ್ಕಾರ ಬೇಕಾಗುತ್ತದೆ ಎಂದು. ಅಧ್ಯಕ್ಷರೇ, ಈಗ ಸರ್ಕಾರ ಬಹಳ ದೃಢವಾಗಿದೆಯಲ್ಲವೇ? ನಾನು ಇವತ್ತು ಪ್ರಾಮಾಣಿಕವಾಗಿ ಒಂದು ಮಾತು ಹೇಳುತ್ತಿದ್ದೇನೆ. ಸುಮಾರು 70-80 ಜನ ಶಾಸಕರು ವಿರೋಧ ಮಾಡುತ್ತಿರುವಂತಹ ಈ ಸರ್ಕಾರಕ್ಕೆ ಯಾವ ದಿಟ್ಟ ನಿಲುವನ್ನೂ ತೆಗೆದುಕೊಳ್ಳುವಂತಹ ಆಸಕ್ತಿ ಇಲ್ಲ, ಸಾಧ್ಯವೂ ಇಲ್ಲ. ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಗುತ್ತಿದೆ. ಒಂದು ಕಡೆ ಮುಖ್ಯಮಂತ್ರಿಗಳಿಗೆ ಭಿನ್ನಮತೀಯರ ಉಪಟಳ. ಅವರಿಗೆ ಅಧಿಕಾರವನ್ನು ಕಿತ್ತುಕೊಳ್ಳುವಂತಹ ಹಠ, ಇವರಿಗೆ ಅಧಿಕಾರವನ್ನು ಉಳಿಸಿಕೊಳ್ಳುವಂತಹ ಚಟ. ಈ ಮಧ್ಯೆ ಈ ರಾಜ್ಯದ ಇಡೀ ಅಭಿವೃದ್ಧಿ ಕೆಲಸಗಳು ನಿಂತುಹೋಯಿತು.

ಆದರಲ್ಲೂ ಕಾವೇರಿ ನೀರಿನಂತಹ ಅತ್ಯಂತ ಗಂಭೀರವಾದಂತಹ ಸಮಸ್ಯೆಯನ್ನು ಕೈಗೆತ್ತಿಕೊಂಡು ಅದರ ಹಿತವನ್ನು ಕಾಪಾಡುವುದರಲ್ಲಿ ಕೋರ್ಟ್ ಮುಂದೆ ಹೋಗುವವರು ಯಾರೂ ಕೂಡ ಗತಿ ಇಲ್ಲವೇ ಸ್ವಾಮಿ. ಈ ರಾಜ್ಯದ ಇಂಥ ಒಂದು ಗಂಭೀರವಾದಂತಹ ಸಮಸ್ಯೆ ಉಚ್ಚನ್ಯಾಯಾಲಯಕ್ಕೆ ಬಂದಾಗ ಇವರ ಕಮಿಷನರ್ ಏನು ಮಾಡುತ್ತಿದ್ದರು? ಇವರ ಸರ್ಕಾರಿ ವಕೀಲರು ಏನು ಮಾಡುತ್ತಿದ್ದರು? ಸನ್ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತಿದ್ದೇನೆ ಕೇಳಿ, ಇದು ಎಲ್ಲಾ ಕಾಲದಲ್ಲೂ ನಡೆಯುತ್ತದೆ. ನಮ್ಮ ಕಾಲದಲ್ಲೂನಡೆಯಿತು. ಯಾವಾಗ ಆಡಳಿತದಲ್ಲಿ ಬಿಕ್ಕಟ್ಟು ತಪ್ಪುತ್ತದೋ, ಭಿನ್ನತೆ ಬರುತ್ತದೋ ಆಗ ಅಧಿಕಾರಿಗಳಲ್ಲಿ ಬಹುಶಃ ಸರ್ಕಾರದ ಮಾತನ್ನು ಕೇಳುವಂತಹ ಪ್ರವೃತ್ತಿಯಲ್ಲಿ ಅತ್ಯಂತ ಗಹನವಾದಂತಹ ಬದಲಾವಣೆಯಾಗುತ್ತದೆ. ಆ ಬದಲಾವಣೆ ಇವತ್ತೂ ಕೂಡ ಆಗಿದೆ. ಆದುದರಿಂದ ನಾನು ಮುಖ್ಯಮಂತ್ರಿಗಳಲ್ಲಿ ಮತ್ತು ನೀರಾವರಿ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮುಖ್ಯಮಂತ್ರಿಗಳೇ, ನಿಮ್ಮ ನೀರಾವರಿ ಮಂತ್ರಿಗಳು ಸರಿಯಾಗಿ ಕೆಲಸ ಮಾಡದೇ ಇದ್ದರೆ ಅವರನ್ನು ಡಿಸ್‌ಮಿಸ್ ಮಾಡಿಬಿಡಿ. ಇಲ್ಲದಿದ್ದರೆ ಖಾತೆ ಬದಲಾವಣೆ ಮಾಡಿಬಿಡಿ. ನಿಮ್ಮ ನಿಮ್ಮದು ಏನಾದರೂ ಇದ್ದುಕೊಳ್ಳಲಿ. I am not worried about it. ಸನ್ಮಾನ್ಯ ನೀರಾವರಿ ಸಚಿವರಿಗೆ ನಾನು ಬೆಳಿಗ್ಗೆ ಹೇಳಿದ್ದೇನೆ. ಕಾವೇರಿ ನದಿಯ ಪಾತ್ರದ ಜನರ ಹಿತವನ್ನು ಕಾಪಾಡುವಂತಹ ಸಂದರ್ಭದಲ್ಲಿ ಅದನ್ನು ಕಾಪಾಡುವುದಕ್ಕೆ ಆಗದೇ ಇರುವಂತಹ ಸಂದರ್ಭ ಬಂದರೆ ಆ ನಿಮ್ಮ ಸ್ಥಾನವೂ ಸೇರಿದ ಹಾಗೆ ಯಾವುದೇ ಒಂದು ಬೆಲೆ ದೊಡ್ಡದಲ್ಲ. ಅದಕ್ಕೆ ಕಾರಣ ಕೂಡ ಹೇಳಿದ್ದೇನೆ. ನೀವು ಒಬ್ಬ ಮಂತ್ರಿಯಾಗಿ ನಿರ್ವಹಣೆ ಮಾಡುವಂತಹ ಜವಾಬ್ದಾರಿಯ ಜೊತೆಗೆ, ಮಣ್ಣಿನ ಮಗನಾಗಿ ಈ ನದಿ ಪಾತ್ರದ ಜನರಿಗೆ ತೀರಿಸಬೇಕಾದಂತಹ ಋಣವೂ ಕೂಡ ಇದೆ. ಮತ್ತೊಮ್ಮೆ ಅದನ್ನು ನಾನು ಪುನರುಚ್ಚಾರ ಮಾಡಿ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ನಾನು ಬೆಳಿಗ್ಗೆ ಹೇಳಿದೆ, ಕಾವೇರಿ ನೀರಿನ ಹಕ್ಕನ್ನು ಉಳಿಸಿಕೊಳ್ಳುವುದರಲ್ಲಿ, ಬಳಸಿಕೊಳ್ಳುವುದರಲ್ಲಿ ನಮಗೆ ಇದು ಒಂದು ಪರಂಪರೆಯಾಗಿ ಬಂದಿದೆ. 1911ರಲ್ಲಿ ಅಡಿಪಾಯ ಇಟ್ಟಂತಹ ಕೆಆರ್‌ಎಸ್ ಕಟ್ಟುವಾಗಲೂ ಕೂಡ ತಮಿಳುನಾಡಿನವರು ಅಬ್‌ಜಕ್ಷನ್ ಮಾಡಿದರು. ಹಾಗಾಗಿ ಅದು 10ವರ್ಷ ಮುಂದೆ ಹೋಯಿತು. ಇದು1924ರವರೆಗೆ ವಿವಾದ ನಡೆಯುತ್ತದೆ. ಆದರೆ ಕೊನೆಗೆ ಆ ಆಣೆಕಟ್ಟೆಯ ಕೆಲಸ 1931ರಲ್ಲಿ ಮುಗಿಯುತ್ತದೆ. ಆದರೆ ಅಂದು ಕೇಂದ್ರೀಕೃತ ವ್ಯವಸ್ಥೆಯ ಸಂಕೇತವಾಗಿದ್ದಂತಹ ಮಹಾರಾಜರು ಆಳುತ್ತಾ ಇದ್ದರು. ನಾವು ಇವತ್ತು ಬಡಾಯಿ ಕೊಚ್ಚಿಕೊಳ್ಳುತ್ತಾ ಇದ್ದೇವೆ. ವಿಕೇಂದ್ರೀಕೃತ ವ್ಯವಸ್ಥೆಯನ್ನು ಮಾಡಿಕೊಂಡು ಜನರಿಂದ, ಜನರಿಗಾಗಿ, ಜನರಿಂದಲೇ ಆರಿಸಲ್ಪಟ್ಟ, ಜನರ ದುಃಖಿದುಮ್ಮಾನಗಳಿಗೆ ಸ್ಪಂದಿಸುವಂತಹ ಈ ಸರ್ಕಾರ, ಅಂದು ಕೇಂದ್ರೀಕೃತ ವ್ಯವಸ್ಥೆಯ ಸಂಕೇತವಾಗಿದ್ದಂತಹ ಮಹಾರಾಜರು, ಇವತ್ತು ಈ ಮಾತನ್ನು ಬಳಸುವಾಗ ಯಾರಿಗೂ ಸಹ ನೋವಾಗದಂತಹ ರೀತಿಯಲ್ಲಿ ಬಳಸುತ್ತಿದ್ದೇನೆ. ವ್ಯವಸಾಯದ ಗಂಧವೇ ಇಲ್ಲದಂತಹ ವರ್ಗದಿಂದ ಬಂದಂತಹ ಸನ್ಮಾನ್ಯ ವಿಶ್ವೇಶ್ವರಯ್ಯನವರು ಅಧಿಕಾರದಲ್ಲಿ ಇದ್ದರು. ಸನ್ಮಾನ್ಯ ವಿಶ್ವೇಶ್ವರಯ್ಯನವರು ಆಗ now or never ಎಂದು ಹೇಳುತ್ತಾರೆ. ಸನ್ಮಾನ್ಯ ಕೃಷ್ಣಾರವರು ಗದ್ದೆಗಳ ಮಧ್ಯೆದಲ್ಲಿಯೇ ಬದಕುತ್ತಿದ್ದಾರೆ, ಅವರಿಗೆ ಹೇಳಬೇಕಾಗಿದೆ. ಹತ್ತು ವರ್ಷಗಳು ಕೃಷ್ಣರಾಜಸಾಗರದ ಕಟ್ಟಡದ ಕೆಲಸ ನಿಂತಾಗ ಅಲ್ಲಿ ಒಂದು ಪದ ಉಪಯೋಗಿಸುತ್ತಾರೆ, ಆ ಕೆಲಸವನ್ನು ತ್ವರಿತಗತಿಯಲ್ಲಿ ಮುಗಿಸಲಿಕ್ಕೆ ಮಾಡಿದ ಪ್ರಯತ್ನಗಳನ್ನು ಹೇಳುತ್ತಾ, Hundreds of Petromax lights were brought to the spot to continue the work for all the 24 hours. The then Maharaja was the symbol of centralised administration. ಮಾನ್ಯ

ವಿಶ್ವೇಶ್ವರಯ್ಯನವರು ನಿಂತುಹೋಗಿದ್ದಂಥ ಕೃಷ್ಣರಾಜಸಾಗರದ ಕಟ್ಟಡದ ಕೆಲಸವನ್ನು ಸಂಪೂರ್ಣಗೊಳಿಸಲಿಕ್ಕೆ ನೂರಾರು ದೀಪಗಳನ್ನು ತಂದು ಇಟ್ಟು ಕೆಲಸವನ್ನು ಮುಗಿಸಿರಬೇಕಾದರೆ ವಿಕೇಂದ್ರೀಕರಣದ ಸಂಕೇತವಾಗಿರತಕ್ಕಂಥ ಜನರಿಂದಲೇ ಆರಿಸಿ ಬಂದಿರುವಂಥ ವಿಶೇಷ ಪರಿಸ್ಥಿತಿಯಲ್ಲಿ ಈ ಸರ್ಕಾರ ಏನು ಕೆಲಸಮಾಡಿದೆ ಎಂಬುದನ್ನು ಹೇಳಲಿ ಸ್ವಾಮಿ.

Let them give me one instance as to what is the special programme they have adopted to expedite the work.

ಎರಡುಸಾರಿ ಸನ್ಮಾನ್ಯ ನೀರಾವರಿ ಸಚಿವರು ಕೆಲಸ ನೋಡಲಿಕ್ಕೆ ಬಂದಿದ್ದರು. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ನಮ್ಮ ಮುಖ್ಯಮಂತ್ರಿಗಳಿಗಂತೂ ವ್ಯವಧಾನ ಆಗಿಲ್ಲ, ಆಗುವಂತೆ ಕಾಣುವುದೂ ಇಲ್ಲ. ಇನ್ನು ಎಷ್ಟುದಿನ ತಳ್ಳಿಕೊಂಡು ಹೋಗುತ್ತಾರೆ. ಇನ್ನೊಂದು 15 ದಿವಸ ತಿಂಗಳು ತಳ್ಳಿಕೊಂಡು ಹೋಗುತ್ತಾರೆ, ಕಂತೆ ಬಿಸಾಕುತ್ತಾರೆ. ಅವರು ಏನು ಬಹುಶಃ ಮುಖ್ಯಮಂತ್ರಿಯಾಗಿ ಕೆಲಸವನ್ನು ನೋಡುವಂಥ ಲಭ್ಯ, ಪುಣ್ಯ ಅವರಿಗೆ ದೊರೆಯುವಂತೆ ಕಾಣುವುದಿಲ್ಲ. ನಾನು ಹೇಳಿದೆ, ನಿಮಗೆ ಕಾಲಿಗೆ ನಮಸ್ಕಾರವನ್ನು ಮಾಡುವುದು ಬಿಟ್ಟು ಇನ್ನು ಉಳಿದದ್ದೆಲ್ಲವನ್ನು ಹೇಳಿದೆ, ಬನ್ನಿ ನೋಡಿ ಎಂದು. ಆದರೆ ಅವರು ಬರಲಿಲ್ಲ. ಸ್ವಾಮಿ ಕೃಷ್ಣರಾಜ ಸಾಗರವನ್ನು ಕಟ್ಟತಕ್ಕಂಥ ಸಂದರ್ಭದಲ್ಲಿ ಆ ಮಹಾರಾಜರಿಗೆ, ಆ ಒಂದು ಸರ್ಕಾರಕ್ಕೆ ಎಷ್ಟು ಆಸಕ್ತಿ ಇತ್ತು ಎಂದರೆ, ಆವತ್ತಿನ ಸರ್ಕಾರದ. The total income of the then Mysore State was 253 lakhs and the estimate for the Krishnarajasagar was 223 lakhs. ಮಹಾರಾಜರ ಸರ್ಕಾರದ ಆವತ್ತಿನ ಒಟ್ಟಾರೆ ಹುಟ್ಟುವಳಿ 253 ಲಕ್ಷ, ಆ ಯೋಜನೆಗೆ ಅವರು ಇಟ್ಟುಕೊಂಡಂಥ ಹಣ 223 ಲಕ್ಷ. ಇಡೀ ಹುಟ್ಟುವಳಿಯನ್ನು ನೀರಾವರಿಯ ಒಂದೇ ಒಂದು ಕೆಲಸಕ್ಕಾಗಿ ನಿಗದಿ ಮಾಡುವಂಥ ರಾಜಕೀಯ ಇಚ್ಛಾಶಕ್ತಿ ಅವತ್ತಿನದಿವಸ ರಾಜರಿಗೆ ಇದ್ದರೆ ಈ ರಾಜ್ಯ ಸರ್ಕಾರಕ್ಕೆ ಆದಕ್ಕೆ ಹಣವನ್ನು ಒದಗಿಸತಕ್ಕಂಥ ಇಚ್ಛಾಶಕ್ತಿ ಏತಕ್ಕೆ ಇಲ್ಲ. ಅದಕ್ಕಾಗಿಯೇ ನಾನು ಹೇಳುತ್ತಿರತಕ್ಕಂಥದ್ದು. ಶ್ರೀಮಾನ್ ವೀರಪ್ಪ ಮೊಯಿಲಿಯವರ ನೇತೃತ್ವದ ಈ ಸರ್ಕಾರ ಈ ರಾಜ್ಯದ ಜನರಿಗೆ ನೀರಾವರಿಯ ವಿಷಯದಲ್ಲಿ ಆಗಿರುವಂಥ ಅನ್ಯಾಯದ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿದೆ.

ಇನ್ನು ಹಣವನ್ನು ಕೊಡುವ ವಿಷಯದಲ್ಲಿ ಹೇಳುವುದಾದರೆ, ನೀರಾವರಿಗಾಗಿ 900 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಆಯವ್ಯಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡಿದ್ದಾರೆ. ಎಲ್ಲಿದೆ ನಿಮ್ಮ ಹತ್ತಿರ ದುಡ್ಡನ್ನು ಕೊಡುವುದಕ್ಕೆ? ಏತಕ್ಕೆ ಸುಳ್ಳನ್ನು ಹೇಳುತ್ತೀರಾ? ಏತಕ್ಕೆ ಬುರುಡೆಯನ್ನು ಬಿಡುತ್ತೀರಾ? ಏತಕ್ಕೆ ದೊಂಬರಾಟವನ್ನು ಆಡುತ್ತೀರಾ? ಸನ್ಮಾನ್ಯ ಅಧ್ಯಕ್ಷರೇ, ದಯವಿಟ್ಟು ತಾವು ಗಮನಿಸಬೇಕು; ಇವರ ಅಭಿವೃದ್ಧಿಯೇತರ ವೆಚ್ಚ, ಸಾಮಾನ್ಯ ನಿರ್ವಹಣೆಯೂ ಸೇರಿದಂತೆ 53.30+20 ಪರ್ಸೆಂಟ್. ಅದು ಕಳೆದವರ್ಷ 67 ಪರ್ಸೆಂಟ್ ಇತ್ತು, ಈ ವರ್ಷ ನಮ್ಮ ಮಾಜಿ ಹಣಕಾಸಿನ ಸಚಿವರು ಇದ್ದಾರೆ, 73.30 per cent is your total unplanned expenditure. ಅಂದರೆ ಇವರ ಗಾತ್ರ 3025. ಆ 3025ರಲ್ಲಿ 73 ಪರ್ಸೆಂಟ್ ಎಂದರೆ 2016 crores. ಇವರ ನಾನ್ ಪ್ಲಾನ್ 73 ಪರ್ಸೆಂಟ್ ಇದೆಯಲ್ಲ ಅದು 2016 ಕೋಟಿ; ಉಳಿಯುವುದು 1009 ಕೋಟಿ. ಇದು ಸರಿಯೆ?ಎದ್ದುನಿಂತು ಹೇಳಿ ನಾವು ಮೋಸ ಮಾಡುತ್ತಿದ್ದೇವೆ ಎಂದು. ಇವರಿಗೆ ಇಡೀ ಯೋಜನಾ ವೆಚ್ಚಕ್ಕಾಗಿ ಇರುವ ಹಣ ಕೇವಲ 1009 ಕೋಟಿ. ಇದರಲ್ಲಿ 900 ಕೋಟಿ ನೀರಾವರಿಗೆ ಕೊಡುತ್ತೇವೆ, 600 ಕೋಟಿ ವಿದ್ಯುಚ್ಛಕ್ತಿಗೆ ಕೊಡುತ್ತೇವೆಂದು ಹೇಳಿಕೊಂಡು ಊರೂರು

ತಿರುಗುತ್ತಾರಲ್ಲ ಏನು ಮಾಡಬೇಕು ಹೇಳಿ, ಎಲ್ಲಿದೆ ಸ್ವಾಮಿ ದುಡ್ಡು? ನಿಮ್ಮ ಸರ್ಕಾರ ಈ ದ್ರೋಹದ ಪರಂಪರೆಯನ್ನು ಅಂಕಿಅಂಶಗಳ ಜಾಲದಲ್ಲಿ ರೈತರನ್ನು ಸಿಕ್ಕಿಸಿ ಸ್ವರ್ಗಕ್ಕೆ ಎತ್ತುವಂಥ ಮೋಸದ ಪರಂಪರೆಯನ್ನು ನೀವು ಮುಂದುವರಿಸಿಕೊಂಡು ಹೋಗುತ್ತಿದ್ದೀರಿ. ಈಗಲಾದರೂ ಬೇಡ, ದಯವಿಟ್ಟು, ಎಲ್ಲದಕ್ಕೂ ಒಂದು ಮಿತಿ ಇದೆ. There is a limitation for all these things ರೈತನ ಸಂಯಮಕ್ಕೂ ಮಿತಿ ಇದೆ. ಈಗಾಗಲೆ ಕಾವೇರಿ ತೀರ್ಪು ಬಂದಾಗ ಆದಂಥ ಘಟನೆಗಳ ಬಗ್ಗೆ ನಿಮ್ಮ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. 1982ರಲ್ಲಿ ನಾನು ಅಲ್ಲಿ ಕುಳಿತುಕೊಂಡು ನನ್ನ ಸರ್ಕಾರಕ್ಕೆ ಹೇಳಿದೆ ಕಾವೇರಿ ಕೊಳ್ಳದ ಜನ ರೊಚ್ಚಿಗೆದ್ದಾರು ಎಚ್ಚರಿಕೆ ಎಂದು; ಆವರೂ ಕೇಳಲಿಲ್ಲ, ಈಗಲೂ ಹೇಳುತ್ತಿದ್ದೇನೆ, ನೀವೂ ಕೇಳುವುದಿಲ್ಲ. ನಾನು ಮಾಡಿದಂಥ ಪ್ರತಿಯೊಂದು ಆಪಾದನೆಯನ್ನು ಅಂಕಿಅಂಶಗಳ ಪ್ರಕಾರ ಪ್ರತಿಪಾದನೆ ಮಾಡುವುದಕ್ಕೆ ನಿಂತುಕೊಂಡಿದ್ದೇನೆ. ಆದುದರಿಂದ 900 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನಾವು ಈ ರಾಜ್ಯದ ಅಭಿವೃದ್ಧಿಗಾಗಿ ಆಗಬೇಕಾಗಿರುವ ನೀರಾವರಿ ಕೆಲಸಗಳನ್ನು ಮಾಡುತ್ತೇವೆಂಬ ಈ ಸರ್ಕಾರದ ಹೇಳಿಕೆ ಏನಿದೆ, ಪ್ರತಿಪಾದನೆ ಏನಿದೆ ಇದನ್ನು ವಿಧಿ ಇಲ್ಲದೆ ಸತ್ಯಕ್ಕೆ ದೂರವಾದುದು, ಮಾಡಲಿಕ್ಕೆ ಸಾಧ್ಯವಿಲ್ಲದ್ದು ಎಂದು ಹೇಳುತ್ತಿದ್ದೇನೆ. ಈ ಕಾರಣಕ್ಕಾಗಿ 2000ಇಸವಿಯೊಳಗೆ ಕೃಷ್ಣ ನದಿ ನೀರನ್ನು ಬಳಸಿಕೊಳ್ಳುವಂತಹ ಕೆಲಸವನ್ನು ಮಾಡುವುದಕ್ಕೆ ಇವರಿಗೆ ಸಾಧ್ಯವಿಲ್ಲ. ಬೆಳಿಗ್ಗೆ ಕೂಡ ಈ ಮಾತನ್ನು ಹೇಳುತ್ತಿದ್ದೆ. 1992-93ರಲ್ಲಿ ನಾನು ರೈತನ ಮಗನಾಗಿ ಈ ಮಾತನ್ನು ಹೇಳದಿದ್ದರೆ ನನ್ನ ದುಗುಡವನ್ನು ತಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಇವರು ನಿಗದಿ ಮಾಡಿದ ಹಣ 6 ಲಕ್ಷದ 47 ಸಾವಿರದ 191 ಲಕ್ಷ ರೂಪಾಯಿ. ಆದಕ್ಕೆ ನಾನು ಹೇಳಿದ್ದು, ಆಯವ್ಯಯದಲ್ಲಿ ತೋರಿರುವಂತ ಅಂಕಿ ಅಂಶಗಳಿಗೆ ಅಪಚಾರ ಮಾಡುವಂಥ ಅಭಿವೃದ್ಧಿ ಕೆಲಸಗಳಿಗೆ ಅಡ್ಡಿ ಮಾಡುವಂಥ ಎಲ್.ಓ.ಸಿ. ಎಂಬ ಅನಿಷ್ಟ ಪದ್ಧತಿಯನ್ನು ಕೈಬಿಡಬೇಕು. ಇದರ ಪ್ರತಿಫಲ ಏನೆಂದರೆ ಇವರು ನಿಗದಿ ಮಾಡಿದ 6 ಲಕ್ಷದ 47 ಸಾವಿರದ 191 ಕೋಟಿಯಲ್ಲಿ ಖರ್ಚು ಮಾಡಿರುವ ಹಣ 2 ಲಕ್ಷದ 78 ಸಾವಿರದ 837 ಕೋಟಿ ಖರ್ಚು ಮಾಡದಿರುವ ಹಣ : 120 ಕೋಟಿ ಪೆಂಡಿಂಗ್ ಬಿಲ್ಸ್ ಅಲ್ಲದೆ 3 ಲಕ್ಷದ 68 ಸಾವಿರದ 354 ಕೋಟಿ ಆಯವ್ಯಯದಲ್ಲಿ ಆದದ್ದು ಪೇಪರ್‌ನಲ್ಲೇ ಉಳಿಯಿತು. ಆದಕ್ಕಾಗಿ ಹೇಳಿದ್ದು, ಹಣ ಖರ್ಚು ಮಾಡುವುದರಲ್ಲಿ, ಕೆಲಸ ಮಾಡುವುದರಲ್ಲಿ ಎರಡರಲ್ಲೂ ಆವರು ವಿಫಲರಾಗಿದ್ದಾರೆ ಎಂದು ಹಣದ ಖರ್ಚು ಇಷ್ಟಾದರೆ ಆವರೇ ಕೊಟ್ಟಿರುವ ಅಂಕಿಅಂಶಗಳನ್ನು ಹೇಳುತ್ತೇನೆ. ಇದು ಕರ್ನಾಟಕ ಸರ್ಕಾರದ ನೀರಾವರಿ ಇಲಾಖೆಯವರು ಕೊಟ್ಟಿರುವ ವಾರ್ಷಿಕ ವರದಿ.

ಉಪಾಧ್ಯಕ್ಷರು: ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ವೈ.ಕೆ.ರಾಮಯ್ಯ : ಈಗ ಶುರುವಾಗಿದೆ. ಅನ್ಯಾಯದ ಪರಂಪರೆಯನ್ನು, ಚರಿತ್ರೆಯನ್ನು ಬಿಚ್ಚಿಡಬೇಕಾಗುತ್ತದೆ. ರಾಜ್ಯದ ಜನತೆಗೆ. ಯಾರಾದರೂ ಆಳುವವರು ಆಳಿಕೊಂಡು ಹೋಗಲಿ ನನ್ನ ಅಭ್ಯಂತರವಿಲ್ಲ. ಆದರೆ ನಾನು ಎಲ್ಲವನ್ನು ಬಿಚ್ಚಿಡಬೇಕಾಗುತ್ತದೆ. ಇದು ಅನಾವಶ್ಯಕ ಬೇಡ ಎಂದರೆ ನಿಲ್ಲಿಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ: ನಿಲುವಳಿ ಸೂಚನೆಯಾದುದರಿಂದ ಎಷ್ಟು ಸಮಯ ಬೇಕಾಗುತ್ತದೆಂದು ಕೇಳುತ್ತಾರೆ.

ಶ್ರೀ ವೈ.ಕೆ. ರಾಮಯ್ಯ : ನೋ ಕಾನ್‌ಫಿಡೆನ್ಸ್ ಮೋಷನ್ ಮಾಡೋಣ. ನೀವು ಹೇಗೆ ಹೇಳುತ್ತೀರಿ ಹಾಗೆ ಮಾಡೋಣ. ಹಣದ ವಹಿವಾಟು ಅಷ್ಟಾದರೆ, ಇವರ ಗುರಿ 4,72,080ಲಕ್ಷ,

ಇವರು ಸಾಧನೆ ಮಾಡಿರುವುದು 31ಸಾವಿರದ 839. ನಾನು ಅಂಕಿಅಂಶಗಳನ್ನು ಕೊಡುತ್ತಿರುವ ಉದ್ದೇಶವೇನೆಂದರೆ, ನೀವು ಹೇಳುವ ರೀತಿಯಲ್ಲಿ ಕಾರ್ಯವನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಇವತ್ತು ಮುಖ್ಯಮಂತ್ರಿಗಳು ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ನಾನು ಇವತ್ತು ಅತ್ಯಂತ ಕಟುವಾಗಿ ಮಾತನಾಡಬೇಕೆಂದು ಬಂದೆ, ಅವರನ್ನು ನೋಡಿದರೆ ಏಕೋ ಎನೋ ಅಯ್ಯೋ ಅನಿಸುತ್ತಿದೆ, ಪಾಪ ಅನಿಸುತ್ತಿದೆ. ತಮ್ಮದೇ ಪಕ್ಷದ ಶಾಸಕರಿಂದ ನಾಲ್ಕನೇ ಸಾರಿ ನನ್ನ ಪ್ರಾಣಕ್ಕೆ ಅಪಾಯ ಒದಗಿತು ಎಂದು ಹೇಳುವಂತಹ ಸ್ಥಿತಿಗೆ ಅವರು ಬಂದಿರುವಾಗ ನಾನು ಕಟುವಾಗಿ ಮಾತನಾಡುವುದು ಸರಿಯಲ್ಲವೆನ್ನುವ ಭಾವನೆ ಬರುತ್ತಿದೆ. ಆದರೆ ವಿಧಿಯಿಲ್ಲ ಹೇಳಬೇಕಾಗುತ್ತದೆ. ಅವರ ಅಮೂಲ್ಯವಾದ ಆಯವ್ಯಯ ಭಾಷಣದಲ್ಲಿ ಅಪ್ಪಣೆ ಕೊಡಿಸುತ್ತಾರೆ,1992-93ರಲ್ಲಿ ಹೊಸದಾಗಿ ಸೃಜಿಸಿರುವ ನೀರಾವರಿ ಸಾಮರ್ಥ್ಯವನ್ನು the potential that was created during 1992-93 1994-95ರಲ್ಲಿ ಬಳಸಿಕೊಳ್ಳಲಾಗುವುದು, ಅದು ನಿಲ್ಲುವುದಿಲ್ಲ; ಅವರ ಪೌರುಷ ಇನ್ನೂ ಮುಂದಕ್ಕೆ ಹೋಗುತ್ತದೆ. ನೀರಾವರಿ ಸಾಮರ್ಥ್ಯವನ್ನು ಸೃಜಿಸಿ ಬಳಸಿಕೊಳ್ಳುವುದರ ನಡುವಿನ ಅವಧಿಯ ಅಂತರ ಇನ್ನು ಮುಂದೆ ಗರಿಷ್ಠ ಒಂದು ವರ್ಷಕ್ಕೆ ಸೀಮಿತಗೊಳಿಸಲಾಗುವುದು. ನೀರಾವರಿ ಸಾಮರ್ಥ್ಯವನ್ನು ಸೃಜಿಸಿ ಅದನ್ನು ಬಳಸಿಕೊಳ್ಳುವುದರ ನಡುವಿನ ಅಂತರವನ್ನು ಇನ್ನುಮುಂದೆ ಗರಿಷ್ಠ ಒಂದು ವರ್ಷಕ್ಕೆ ಸೀಮಿತಗೊಳಿಸಲಾಗುವುದು. The gap will be reduced to one year ಎಂದು ಮುಖ್ಯಮಂತ್ರಿಗಳು ಆವೊತ್ತು ಭಾಷಣ ಮಾಡಿದ್ದಾರೆ. ಇದನ್ನು ಎಷ್ಟರಮಟ್ಟಿಗೆ ರೆಡ್ಯೂಸ್ ಮಾಡಿದ್ದಾರೆ ಅದನ್ನು ದಯಮಾಡಿ ಮುಖ್ಯಮಂತ್ರಿಗಳು ಅಥವಾ ಉಪ ಮುಖ್ಯಮಂತ್ರಿಗಳು ನನಗೆ ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕು. ನಾನು ಆವತ್ತೇ ಹೇಳಿದ್ದೆ. ನಿಮ್ಮ ಕೈಯಲ್ಲಿ ಇದು ಸಾಧ್ಯವಿಲ್ಲವೆಂದು. ಇಲ್ಲಾ ಇಲ್ಲ ನೀವು ಎಲ್ಲಕ್ಕೂ ಚಾಪೆ ಎಳೆಯಬೇಡಿ ನಾನು ಸಾಧಿಸುತ್ತೇನೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದನ್ನು ನೀವು ಎಷ್ಟರಮಟ್ಟಿಗೆ ಸಾಧನೆ ಮಾಡಿದ್ದೀರಿ ಎಂದು ನಿರ್ದಿಷ್ಟವಾಗಿ ನಾನು ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.How you have successful to bring down the utility of water and reduce it to one year.
ಅದರ ಬಗ್ಗೆ ನನಗೆ ಮಾಹಿತಿ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮತ್ತೊಂದು ವಿಷಯವನ್ನು ಸದನದ ಮುಖಾಂತರ ಜನತೆಯ ಗಮನಕ್ಕೆ ತರಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ ಅಣೆಕಟ್ಟುಗಳನ್ನು ಕಟ್ಟಿ ಇರುವ ಸಾಮರ್ಥ್ಯದ ಬಹುಭಾಗವನ್ನು ನಾವು ಉಪಯೋಗಿಸಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. 12ಲಕ್ಷದ 44 ಸಾವಿರದ 936 ಲಕ್ಷ ಎಕರೆಗೆ ಆಗುವಂತಹ ನೀರು ನಮ್ಮ ಡ್ಯಾಮ್‌ಗಳಲ್ಲಿ ತುಂಬಿ ತುಳುಕುತ್ತಿದೆ. ಆದರೆ ಅದಕ್ಕೆ ಕಾಲುವೆ ಇಲ್ಲ. ಹೇಮಾವತಿ ಕಬಿನಿ, ನಾರಾಯಣಪುರ ಡ್ಯಾಮ್‌ಗಳಲ್ಲಿ ಅಷ್ಟೊಂದು ನೀರಿದೆ. ಈ ಸರ್ಕಾರಕ್ಕೆ ಆ ಕೆಲಸವನ್ನು ಮಾಡಿ ರೈತರ ಜಮೀನುಗಳಿಗೆ ನೀರು ಬಿಡುವ ಯೋಗ್ಯತೆ ಇಲ್ಲ. ಇದಕ್ಕಿಂತ ಇನ್ನೊಂದು ದುರಂತ ಬೇಕೆ? This much of extent ಏನು ಸ್ವಾಮಿ ಹೇಳಿ? ಡ್ಯಾಮ್‌ಗಳಲ್ಲಿರುವ ನೀರನ್ನು ಕಾಲುವೆ ಮಾಡಿ ಬಿಟ್ಟು ಕೊಡುವ ರಾಜಕೀಯ ಇಚ್ಛಾಶಕ್ತಿ ಈ ರಾಜ್ಯದ ರೈತರ ಬಗ್ಗೆ ನಿಮಗೆ ಕಳಕಳಿಯಿಲ್ಲವೆ? ಇಲ್ಲ ಎನ್ನುವುದಾದರೆ ಏಕೆ ಇಲ್ಲ? ನಾನು ಅದಕ್ಕೆ ಹೇಳಿದ್ದು ನಮ್ಮ ಮುಖ್ಯಮಂತ್ರಿಗಳಿಗೆ ಉಪ್ಪುನೀರಿನ ಬಗ್ಗೆ ಇರುವಂತಹ ಆಸಕ್ತಿ ಆಸೆ, ಪ್ರಾಮಾಣಿಕತೆ ನದಿಯ ನೀರಿನ ಬಗ್ಗೆ ಇಲ್ಲ ಎಂದು. ನನಗೆ ಪರಿಣತಿ ಇಲ್ಲ, ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಯಾರಾದರೂ ಪರಿಣತರು ಇದ್ದರೆ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಒಂದು ವರ್ಷಕ್ಕೆ 12ಲಕ್ಷದ 44 ಸಾವಿರದ 936ಲಕ್ಷ ಎಕರೆಗೆ ನೀರು ಕೊಟ್ಟರೆ

ಈ ರಾಜ್ಯದ ಆರ್ಥಿಕ ಪರಿಸ್ಥಿತಿ ಎಷ್ಟು ಉತ್ತಮವಾಗುತ್ತದೆ? ಇಷ್ಟೊಂದು ಎಕರೆಗಳಿಗೆ ಆಗುವಂತಹ ನೀರನ್ನು ನಮ್ಮ ಡ್ಯಾಮ್‌ಗಳಲ್ಲಿ ತುಂಬಿಕೊಂಡು ಜಮೀನುಗಳಿಗೆ ನೀರು ಕೊಡಲಿಕ್ಕೆ ಆಗದಿರುವಂತಹ ಪಾಪದ ಅನ್ಯಾಯಕ್ಕೆ ನಾವೆಲ್ಲರೂ ಸೇರಿ ಕೊಳ್ಳುತ್ತೇವೆ. ನಾನೂ ಇದ್ದೇನೆ.

4.35 ಪಿ.ಎಂ

ಶ್ರೀ ಕೆ.ಎಚ್. ರಂಗನಾಥ್ : – ತಮಗೆ ಕೋಪ ಬರುವುದಿಲ್ಲ ತಾನೆ?

ಶ್ರೀ ವೈ.ಕೆ. ರಾಮಯ್ಯ : – ಇಲ್ಲ.

ಶ್ರೀ ಕೆ.ಎಚ್. ರಂಗನಾಥ್ : – ಕುಳಿತುಕೊಳ್ಳಿ ಹಾಗಾದರೆ. ನಾವೇನೋ 89ರಿಂದ ಬಂದವರು. ಈಗ ತಾವು 12ಲಕ್ಷದ್ದು ಎಂದು ಹೇಳುತ್ತಿದ್ದೀರಿ. ಹತ್ತು ವರ್ಷಗಳಿಂದ ಇದು ಹಾಗೆಯೇ ಉಳಿದುಕೊಂಡುಬಂದಿದೆ. ಸ್ವಲ್ಪ ಹೆಚ್ಚುಕಡಿಮೆ 83ರಿಂದ 89ರವರೆಗೆ ಹಾಗೆಯೇ ಇದೆ. ರಾಮಯ್ಯನವರೇ, ನಾವು ಯಾರನ್ನು ಕೇಳುವುದು? ನೀವೇ ಹೇಳಿ ಉಪಾಧ್ಯಕ್ಷರೇ....

ಉಪಾಧ್ಯಕ್ಷರು : – ತಮ್ಮ ಸರ್ಕಾರವನ್ನೂ ಸೇರಿಸಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಕೆ.ಎಚ್. ರಂಗನಾಥ್ : – 83ರಿಂದ 89ವರೆಗೆ ಎಂದು ನಮ್ಮನ್ನು ಏಕೆ ಸೇರಿಸುತ್ತಿದ್ದೀರಿ? ನಿರಾಪರಾಧಿಗಳನ್ನು ಏಕೆ ಸೇರಿಸುತ್ತಿದ್ದೀರಿ? 89ರಿಂದ ಎಂದು ನೀವು ಏನಾದರೂ ಬಯ್ದುರೆ ಬಯ್ದುಕೊಳ್ಳಲಿ ಎಂದು ಸುಮ್ಮನೆ ಕುಳಿತುಕೊಂಡು ಕೇಳಬಹುದು. 83ರಿಂದ 90ವರೆಗೆ ಎಂದರೆ ಬಹಳಷ್ಟು ನಮ್ಮ ಸ್ನೇಹಿತರು ಅಲ್ಲಿದ್ದಾರೆ. ಎಲ್ಲ ನಿಮ್ಮ ಕೈಯಲ್ಲಿತ್ತು. ನಾವೆಲ್ಲಾ ಎಂದು ಪಾಪ ನಂಜುಡಸ್ವಾಮಿಯವರನ್ನು ಕೂಡ ತಾವು ಸೇರಿಸಿಬಿಟ್ಟಿರಿ.

ಪ್ರೊ : ಎಂ.ಡಿ.ನಂಜುಡಸ್ವಾಮಿ : – ಇಲ್ಲ. ನಾನು ಮಾತನಾಡುವಾಗ ಎಲ್ಲವನ್ನೂ ಸೇರಿಸಿ ಮಾತನಾಡುತ್ತೇನೆ.

ಶ್ರೀ ವೈ.ಕೆ.ರಾಮಯ್ಯ : – ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಪ್ರಶ್ನೆಯನ್ನು.....

ಶ್ರೀ ಕೆ.ಎಸ್.ರಂಗನಾಥ್ : – ನೀವು ಮಾತನಾಡುವುದು ಸರಿ. ಅವರು ಮಾತನಾಡುವಾಗ ಅವರನ್ನು ಬಿಟ್ಟು ಎಲ್ಲರನ್ನೂ ಸೇರಿಸುತ್ತಾರೆ.

ಶ್ರೀ ವೈ.ಕೆ. ರಾಮಯ್ಯ : – ಈ ಪ್ರಶ್ನೆಯನ್ನು ನೂರಕ್ಕೆ ನೂರು ನಾನು ನಿರೀಕ್ಷೆ ಮಾಡಿದ್ದೆ. ಆದರೆ ಮಾನ್ಯ ರಂಗನಾಥ್ ಅವರಿಂದ ನಿರೀಕ್ಷೆ ಮಾಡಿರಲಿಲ್ಲ, ಬೇರೆಯವರಿಂದ ನಿರೀಕ್ಷೆ ಮಾಡಿದೆ. ದಯಮಾಡಿ ಇದನ್ನು ಓದಿ. ನನ್ನ ಸರ್ಕಾರ ಇರುವಾಗ ನಾನು ಏನು ಮಾತನಾಡಿದ್ದೇನೆ ಎಂದು. ಇದಕ್ಕಿಂತ ಕಟುವಾದ ಭಾಷೆಯನ್ನು ನಾನು ಉಪಯೋಗಿಸಿದ್ದೇನೆ. ಈ ಸದನದಲ್ಲಿ ಆಡಳಿತ ಪಕ್ಷದಲ್ಲಿ ಕುಳಿತುಕೊಂಡು ನಾನು ನೀರಿನ ಬಗ್ಗೆ ಮಾಡಿರತಕ್ಕಂಥ ಭಾಷಣ ದಯವಿಟ್ಟು ಓದಿನೋಡಿ.

ಉಪಾಧ್ಯಕ್ಷರು : – ಸ್ವಲ್ಪ ಜಾಗ್ರತೆಯಾಗಿ ಮುಗಿಸಿ ರಾಮಯ್ಯನವರೇ.

ಶ್ರೀ ವೈ.ಕೆ.ರಾಮಯ್ಯ : – ಸನ್ಮಾನ್ಯ ಅಧ್ಯಕ್ಷರೇ, 83ರಿಂದ 88ರವರೆಗೆ ನಾವು ಸೋತಿದ್ದೆವು. ನಾನು ಆದಕ್ಕೆ ಹೇಳುತ್ತಿದ್ದೇನೆ; ನೀವು ಅರ್ಥಮಾಡಿಕೊಳ್ಳುತ್ತಿಲ್ಲ. ಇದು ಅನ್ಯಾಯದ ಪರಂಪರೆ ಎಂದು ಹೇಳಿದಮೇಲೆ ಎಲ್ಲರೂ ಭಾಗಿಯಾಗಿದ್ದೆವು ಎಂದು ನನ್ನನ್ನೂ ಸೇರಿಸಿಕೊಂಡು ಹೇಳುತ್ತಿದ್ದೇನೆ. ನಮ್ಮ ಸರ್ಕಾರವನ್ನು ಹೊರತುಮಾಡಿ ನಾನು ಹೇಳುತ್ತಿಲ್ಲ. ನಾವು ಏನು ಮಾಡಿದೆವು, ಅದರ ಚರಿತ್ರೆಯನ್ನು ಬಿಚ್ಚುವುದು ಬೇಡ. ನಾನು ರಾಜೀನಾಮೆ ಕೊಟ್ಟಿದ್ದು ಏಕೆ? The very first day when I disagreed with the then Chief Minister I tendered my resignation. I never stayed even for a day after having a difference with the then Chief

Minister.

ಒಂದೇ ಒಂದು ದಿವಸ ನಾನು ಮಂತ್ರಿಮಂಡಲದ ಸದಸ್ಯನಾಗಿ ಉಳಿದುಕೊಳ್ಳಲಿಲ್ಲ. ಮುಖ್ಯ ಮಂತ್ರಿಗಳ ಕಾರ್ಯವೈಖರಿಯನ್ನು ಪ್ರತಿಭಟನೆ ಮಾಡಿ 24 ಗಂಟೆಯಲ್ಲೇ ರಾಜೀನಾಮೆ ಕೊಟ್ಟೆ. ಅದು ಪ್ರಾಮಾಣಿಕವಾಗಿ ಕೊಟ್ಟರೇ ಎಂದು ಚರ್ಚೆ ಮಾಡುವಂಥ ಸಂದರ್ಭ ಬರುತ್ತದೆ ಆಗ ಚರ್ಚೆ ಮಾಡೋಣ. ಆದರೆ ಅವತ್ತು ನಾನು ಒಂದು ಮಾತನ್ನು ಹೇಳಿದ್ದೆ. ಈ ಸರ್ಕಾರಕ್ಕೆ ಗಂಡಸ್ತನ ಇದ್ದರೆ ನೀವು ಈ ಕೆಲಸ ಮಾಡಿ ಎಂದು ಹೇಳಿದ್ದೆ. ಆ ಪದವನ್ನು ನಾನು ಇಲ್ಲಿ ಹೇಳಿಲ್ಲ. ಸನ್ಮಾನ್ಯ ರಂಗನಾಥ್ ಅವರು ಹಿರಿಯರು ಇದ್ದಾರೆ. ಅವರ ಬಗ್ಗೆ ನನಗೆ ಬಹಳ ಅಭಿಮಾನ ಇದೆ. ದಯವಿಟ್ಟು ಅದನ್ನು ಓದಿನೋಡಿ. ಇಲ್ಲಿ ನಾನು ಆ ಕಟುವಾದ ಶಬ್ದವನ್ನು ಉಪಯೋಗಿಸುತ್ತಿಲ್ಲ. ನೀವು ತಾಳಿ ಕೊಡುವುದು, ಸೀರೆ ಕೊಡುವುದು, ಕುಪ್ಪಸ ಕೊಡುವುದು-ಇದನ್ನೆಲ್ಲ ನಿಲ್ಲಿಸಿಬಿಡಿ ಎಂದು ಹೇಳಿದ್ದೇನೆ. ಸ್ವಾಮಿ, ನೀರಾವರಿಗೆ ನೀರು ಕೊಟ್ಟುಬಿಟ್ಟರೆ ಬೇರೆ ಕಾರ್ಯಕ್ರಮವನ್ನು ಮುಚ್ಚಬೇಕಾಗುತ್ತದೆ ಎಂದು ನಿಮ್ಮ ಪಕ್ಷದ ಸದಸ್ಯರು ಕುಳಿತುಕೊಂಡು ಪ್ರಶ್ನೆ ಮಾಡಿದ್ದರು. ಅದಕ್ಕೆ ನಾನು ಹೇಳಿದ್ದು, ನೀರಾವರಿಗೆ ಹಣ ಖರ್ಚುಮಾಡಿದರೆ ಒಂದು ವರ್ಗದ ಜನತೆಗೆ ಮಾತ್ರ ಅನುಕೂಲವಾಗುತ್ತದೆ ಎನ್ನುವ ವ್ಯಾಖ್ಯಾನ ನಿಮ್ಮ ಮುಖ್ಯಮಂತ್ರಿಗಳಿಗೆ ಏನಾದರೂ ಇದ್ದರೆ ತಿದ್ದಿಕೊಳ್ಳಬೇಕು. ರಾಜಕಾರಣದಲ್ಲಿ ಈ ಮನೆಯ ಸದಸ್ಯನಾಗಿ ನನಗೂ ಹತ್ತು ವರ್ಷ ವಯಸ್ಸಾಗಿದೆ. ಆದ್ದರಿಂದ ನಾನು ಏನು ಮಾಡಬಲ್ಲೆ ಎಂಬುದು ನನ್ನ ಆತ್ಮಕ್ಕೆ ಗೊತ್ತು. ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಹೇಮಾವತಿ ಟನಲ್ ಕೆಲಸ ನಿಲ್ಲಿಸಬೇಕೆಂದು ಅವತ್ತಿನ ಮಾನ್ಯ ನೀರಾವರಿ ಸಚಿವರಾದ ಶ್ರೀಮಾನ್ ದೇವೇಗೌಡರು ಹೇಳಿದಾಗ ನಾನು ಹೇಳಿದ್ದೆ ನನ್ನ ಮಂತ್ರಿ ಕೆಲಸಕ್ಕೆ ರಾಜೀನಾಮೆ ತೆಗೆದುಕೊಳ್ಳಿ ಎಂದು; ಆದ್ದರಿಂದ ನಮ್ಮ ಸರ್ಕಾರ ಇದ್ದಾಗ ಪರಿಪೂರ್ಣವಾಗಿ ಎಲ್ಲ ಮಾಡಿದ್ದೇವೆ ಎಂದು ಹೇಳದೇ ಇದ್ದರೂ ಕೂಡ ನನ್ನ ಆತ್ಮಕ್ಕೆ ವಂಚನೆ ಇಲ್ಲದಹಾಗೆ ನಾನು ಕೆಲಸ ಮಾಡಿದ್ದೇನೆ ಎಂದು ಮಾತ್ರ ನನ್ನ ಸ್ನೇಹಿತರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ಇರುವಂಥ ಪರಿಸ್ಥಿತಿಯ ದುರ್ಲಾಭವನ್ನು ಪಡೆಯುವುದಕ್ಕೆ ನನಗೆ ಇಷ್ಟವಿಲ್ಲ. ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ಕಾವೇರಿ ನೀರನ್ನು ಉಳಿಸಿಕೊಳ್ಳುವಂಥ ಪ್ರಾಮಾಣಿಕವಾದ ಪ್ರಯತ್ನ ನಡೆಯಿತು ಎಂದು ಹೇಳಿದರೆ, ಇದು ನಾನು ಬಂಗಾರಪ್ಪನವರನ್ನು ಖುಷಿ ಮಾಡಲಿಕ್ಕೆ ಅಲ್ಲ. ಬಂಗಾರಪ್ಪನವರು, ನಾನು ಈ ಸದನಕ್ಕೆ ಗೆದ್ದೇ ಬರಬಾರದು ಶತಾಯ ಗತಾಯ ಪ್ರಯತ್ನಪಟ್ಟವರು. ರಾಮಯ್ಯ ಇಲ್ಲಿ ಬರಲೇಕೂಡದು, ಏನಾದರೂ ಮಾಡಿ, ಬರದಂತೆ ತಡೆಯಬೇಕೆಂದು ಕೆಲಸ ಮಾಡಿದವರು. ಆದ್ದರಿಂದ, ಆ ಭಾವನೆ ನನ್ನಲ್ಲಿ ಇಲ್ಲ. ತಪ್ಪೋ, ಸರಿಯೋ ಒಂದು ಆರ್ಡಿನೆನ್ಸ್ ತಂದರು; ನಿರ್ಣಯ ಮಾಡಿದರು. ನಾನು ಅವತ್ತು ಶಾಸನ ಸಭೆಯ ಸದಸ್ಯನಾಗಿರಲಿಲ್ಲ. ಆದರೂ ಕೂಡ, ನನ್ನನ್ನೂ ಸೇರಿಸಿಕೊಂಡು ಒಂದು ಉನ್ನತ ಮಟ್ಟದ ಸಭೆ ಕರೆದರು. ಆ ಸಭೆಯಲ್ಲಿ ಒಂದ್ಲಲ್ಲ ನಾಲ್ಕು ಸಾರಿ ಚರ್ಚೆ ಮಾಡಿದರು. ಇವತ್ತು ಸನ್ಮಾನ್ಯ ಮಂತ್ರಿಗಳು ಹೇಳಬೇಕು, ನಿಮ್ಮ ಮುಖ್ಯಮಂತ್ರಿಗಳಿಗೆ ಏನಾಗಿದೆ? 9 ತಿಂಗಳಿಂದ ನಾನು ಅವರಿಗೆ ಸತತವಾಗಿ ಬೇಡಿಕೊಳ್ಳುತ್ತಿದ್ದೇನೆ. ಕೊನೆಯಪಕ್ಷ ಕಾವೇರಿ ಬೇಸಿನ್‌ಗೆ ಸಂಬಂಧಪಟ್ಟ ಶಾಸಕರನ್ನು ಕರೆದು, ಅಲ್ಲಿ ಆಗಿರುವಂಥ ಕಾರ್ಯಕ್ರಮದ ಬಗ್ಗೆ, ಯೋಜನೆಯ ಅನುಷ್ಠಾನದ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿದೆ. ಅವರು ಕರೆದಿದ್ದಾರೆಯೇ, ಕೇಳಿ. ಏಕೆ ಕರೆಯಲಿಲ್ಲ. ಆದರೆ, ನಮ್ಮ ಸರ್ಕಾರವಿದ್ದಾಗ ಚರ್ಚೆಯಾದರೂ ನಡೆಯುತ್ತಿತ್ತು. ಅದನ್ನಾದರೂ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ನಾನು ಆಗಲೇ ಹೇಳಿದೆ. ಈ ಸರ್ಕಾರದ ನಿಷ್ಕ್ರಿಯತೆಗೆ ಏನು ಕಾರಣ ಇರಬಹುದು. ಅಧ್ಯಕ್ಷರೇ, ನಾನು ಹೇಳಿದಹಾಗೆ ಈಗ ಮುಖ್ಯಮಂತ್ರಿಗಳು ಇರಬೇಕಾಗಿತ್ತು, ಬಹಳ ಚೆನ್ನಾಗಿರುತ್ತಿತ್ತು. 1985ರಲ್ಲಿ ತೆಲಗು ಗಂಗಾ ವಿಷಯ ಬಂದಾಗ, ಇವತ್ತಿನ ಸನ್ಮಾನ್ಯ ಮುಖ್ಯಮಂತ್ರಿಗಳು ಮಾಡಿರತಕ್ಕ ಭಾಷಣವನ್ನು, ನಾನು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಓದಿದೆ, ಏಕೆಂದರೆ, ಅವು ಬಹಳ ಸಣ್ಣ ಅಕ್ಷರಗಳು. ಅವರ ಭಾಷಣದ ಸಾರಾಂಶ ಇಷ್ಟೆ. ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ರಾಷ್ಟ್ರರಾಜಕಾರಣದ ತೆವಲುತೀರಿಸಿಕೊಳ್ಳುವುದಕ್ಕೆ, ಎನ್.ಟಿ.ರಾಮರಾಯರ ಸ್ನೇಹವನ್ನು ಪಡೆಯುವುದಕ್ಕೆ, ಈ ರಾಜ್ಯದ ಹಿತವನ್ನು ಮಾರಾಟ ಮಾಡುತ್ತಿದ್ದಾರೆ ಎನ್ನುವುದು ಇದರ ಒಟ್ಟು ಸಾರಾಂಶ. ಇದಕ್ಕೆ ಪೇಪರ್ ಕ್ಲಟಿಂಗ್ಸ್, ಎಡಿಟೋರಿಯಲ್ ಬಹಳ ಇದೆ. ಅದರ ತಾರೀಖು ಹೇಳುತ್ತೇನೆ, ಬೇಕಾದರೆ, ತರಿಸಿ ಓದಿಕೊಳ್ಳಿ.

ಉಪಾಧ್ಯಕ್ಷರು :- ತಾವು ಈಗಾಗಲೇ ಬಹಳ ಸಮಯ ಮಾತನಾಡಿದ್ದೀರಿ. ಇನ್ನೂ ಹಿರಿಯ ಸದಸ್ಯರು ಮಾತನಾಡಬೇಕಾಗಿದೆ. ಒಟ್ಟು 87 ನಿಮಿಷ ಮಾತನಾಡಿದ್ದೀರಿ, ತಾವು ದಯಮಾಡಿ ಮುಕ್ತಾಯ ಮಾಡಿ.

ಶ್ರೀ ವೈ.ಕೆ. ರಾಮಯ್ಯ :- 26ನೇ ಜುಲೈ 1985 ಆವತ್ತು, ಇವತ್ತಿನ ಸಭಾನಾಯಕರಾದ ಸನ್ಮಾನ್ಯ ಮೊಯ್ಲಿಯವರು ವಿರೋಧಪಕ್ಷದ ನಾಯಕರು. ಆವತ್ತಿನ ಮುಖ್ಯಮಂತ್ರಿಗಳಿಗೆ ಆಶ್ವಾಸನೆ ನೀಡುತ್ತಾರೆ. ನೀವು ಎನ್.ಟಿ.ರಾಮರಾಯರ ಸ್ನೇಹ ಮಾಡಿ, ಅವರ ಸ್ನೇಹವನ್ನು ಉಳಿಸಿಕೊಂಡು, ರಾಷ್ಟ್ರರಾಜಕಾರಣದ ತೆವಲು ತೀರಿಸಿಕೊಳ್ಳುವುದಕ್ಕೆ, ರಾಜ್ಯದ ಹಿತವನ್ನು ಬದಿಗೊತ್ತುತ್ತಿದ್ದೀರಿ ಎಂದು. ಕಾವೇರಿ ನೀರನ್ನು ಬಳಕೆ ಮಾಡುವುದರಲ್ಲಿ, ಆ ನೀರಿನ ಹಕ್ಕನ್ನು ಉಳಿಸಿಕೊಳ್ಳುವುದರಲ್ಲಿ, ವೀರಪ್ಪಮೊಯ್ಲಿಯವರ ನಿರಾಸಕ್ತಿಯನ್ನು ಕಂಡಾಗ, ಇವರು ಯಾವ ತೆವಲು ತೀರಿಸಿಕೊಳ್ಳುವುದಕ್ಕೆ, ಕರ್ನಾಟಕದ ಜನರ ಹಿತವನ್ನು ಬದಿಗೊತ್ತುತ್ತಿದ್ದಾರೆ ಎನ್ನುವ ಪ್ರಶ್ನೆಯನ್ನು ಕೇಳಬೇಕಾಗಿದೆ. ಆವತ್ತು ರಾಮಕೃಷ್ಣ ಹೆಗಡೆಯವರು ರಾಷ್ಟ್ರ ರಾಜಕಾರಣದ ತೆವಲಿಗಾಗಿ, ಈ ರಾಜ್ಯದ ರೈತರ ಹಿತವನ್ನು ಬದಿಗೊತ್ತಿದರು. ನಾನು ಇವತ್ತು ಕೇಳಬೇಕಾಗುತ್ತದೆ, ನಿಮ್ಮನ್ನು ಮುಖ್ಯಮಂತ್ರಿ ಮಾಡಿರುವಂಥ ಆಂಧ್ರದ ನರಸಿಂಹರಾಯರನ್ನು ಸುಪ್ರೀತರನ್ನಾಗಿ ಮಾಡುವುದಕ್ಕೆ, ನೀವು ಕೃಷ್ಣಾದ ಬಗ್ಗೆ ನಿಷ್ಕ್ರಿಯರಾಗಿದ್ದೀರಾ? ಮತ್ತೆ ನಿಮ್ಮ ನಿರಾಸಕ್ತಿ ಏಕೆ? ನಿಮ್ಮ ಈ ನಿಧಾನಗತಿ ಏಕೆ, ನಿಮ್ಮ ಅನಾದರಣೆ ಏಕೆ? ನಾನು ವಿಧಿ ಇಲ್ಲದೆ ಹೇಳಬೇಕಾಗುತ್ತದೆ. ನಿಮ್ಮನ್ನು ಮುಖ್ಯಮಂತ್ರಿ ಕುರ್ಚಿಗೆ, ತಂದು ಕೂಡಿಸಿರುವಂಥ ಪ್ರಧಾನ ಮಂತ್ರಿಯವರನ್ನು ಸುಪ್ರೀತರನ್ನಾಗಿ ಮಾಡುವುದಕ್ಕೆ, ನೀವು ಇವತ್ತು ನಿಷ್ಕ್ರಿಯರಾಗಿದ್ದೀರಿ ಎಂದು.

ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದಂತೆ ಕಾನೂನು ನಮಗೆ ಕೈ ಕೊಟ್ಟಿದೆ. ನ್ಯಾಯಾಲಯ ನಮಗೆ ಅನ್ಯಾಯ ಮಾಡಿದೆ. ಪರಿಸ್ಥಿತಿ ಕೂಡ ನಾನು ಬೆಳಿಗ್ಗೆ ಹೇಳಿದೆ, ನಮ್ಮ ರಂಗನಾಥ ಸಾಹೇಬರು ಇರಲಿಲ್ಲ. ಎಲ್ಲಾ ಸರ್ಕಾರಗಳಲ್ಲೂ ನೀರಾವರಿಮಂತ್ರಿಗಳೇ ಡಿಸಿಡೆಂಟ್ ಲೀಡರ್ಸ್ ಆಗಬೇಕೇ? ಎಂತಹ ದುರಾದೃಷ್ಟ ನಮ್ಮದು ಎಂದು. ನಿಮ್ಮ ಕಾಲದಲ್ಲೂ ಅಷ್ಟೇ ಅಲ್ಲ ಆಗಲೂ ಹಾಗೆಯೇ ಆಯಿತು.

ಶ್ರೀ ಕೆ.ಎಚ್. ರಂಗನಾಥ್ :- ದೇವರಾಜ ಅರಸರ ಕಾಲದಲ್ಲಿ ದೊಡ್ಡದು ಮಾಡಿ ಆಗಲೇ ಹೆಚ್ಚು ಹಣ ಕೊಟ್ಟರು. 1968-69ರಲ್ಲಿ ವೀರೇಂದ್ರಪಾಟೀಲರು ಮೊದಲು ಮುಖ್ಯಮಂತ್ರಿಗಳಾದಾಗ ಸ್ವಲ್ಪ ಹಣ ಜಾಸ್ತಿ ಮಾಡಿದರು. ತದನಂತರ ಹೆಚ್ಚು ಜಾಸ್ತಿಯಾಗಿ ಇವತ್ತಿನ ಪರಿಸ್ಥಿತಿಗೆ ಇವತ್ತು ಏನು ನೀರು ಇದೆ ಅದು ಆಯಿತು. ಆದ್ದರಿಂದ ಆಗಲೂ ಹಾಗೆ ಆಯಿತು ಎಂದು ಹೇಗೆ ಹೇಳುತ್ತೀರಿ? ಅದು

ಸರಿಯಾದಂತಹ ಮಾತು ಆಗುವುದಿಲ್ಲ.

ಶ್ರೀ ವೈ.ಕೆ. ರಾಮಯ್ಯ :- ಇತ್ತೀಚಿನ ವರ್ಷಗಳಲ್ಲಿ. ಅದಕ್ಕಿಂತ ಹಿಂದೆ ಆಗಿದ್ದು ಬೇಡ. ಇತ್ತೀಚಿನ ದಶಕ ಎಂದು ಅಂದುಬಿಡುತ್ತೇನೆ. 1980ರ ದಶಕದ ಈಚೆಗೆ ಎಂದು ಹೇಳುತ್ತೇನೆ. ಈ 80ರ ದಶಕದ ಈಚೆಗೆ ನೀರಾವರಿ ಮಂತ್ರಿಗಳು ಡಿಸಿಡೆಂಟ್ ಲೀಡರ್ಸ್ ಆಗುತ್ತಿರುವುದು ಕೂಡ ಈ ಒಂದು ಕೆಲಸ ಪ್ರಗತಿ ಆಗದೆ ಇರುವುದಕ್ಕೆ ಕಾರಣ ಎಂದು ನನ್ನ ಭಾವನೆ. Because there is LOC system. The Irrigation on Minister will be reduced to the position of a Maistry in this system.

ಮೇಸ್ತ್ರಿಗೆ ದುಡ್ಡು ಕೊಟ್ಟರೆ ಕೆಲಸ ಮಾಡಿಸುತ್ತಾನೆ. ಕಂಟ್ರಾಕ್ಟ್‌ರ್ ಮಣ್ಣು ಹಾಕಿಸುತ್ತಾನೆ ಆ ಕಂಟ್ರಾಕ್ಟ್‌ರ್ ದುಡ್ಡು ಕೊಡದಿದ್ದರೆ ಮೇಸ್ತ್ರಿ ಮರದ ಕೆಳಗೆ ಮಂಕ್ರಿ ಇಟ್ಟು ಮಲಗಿಕೊಳ್ಳುತ್ತಾನೆ. ಬಹುಶಃ ರಾಜ್ಯದ ನೀರಾವರಿ ಕೆಲಸಗಳು ಕೂಡ ಹಾಗೆಯೇ ಆಗಿದೆ. ಹಣಕಾಸು ಕೊಡಬೇಕಾದಂತಹ ಮುಖ್ಯಮಂತ್ರಿಗಳು ರಾಜಕೀಯ ಕಾರಣಕ್ಕಾಗಿ ಇವರ ಮೇಲೆ ಲಗಾಮುಹಾಕುತ್ತಾರೆ. The ultimate victims are the farmers of Karnataka. I think I am not wrong in this Analysis. ಅವತ್ತೂ ಅದೇ ಆಯಿತು, ಇವತ್ತೂ ಅದೇಆಯಿತು. ಆದರೆ What is the cumulative effect of this? The cumulative effect of this particular game is that we have deprived water to crores of our people. This is the cumulative effect of this particular game. ನಾನು ಈಗಾಗಲೇ ಹೇಳಿದ್ದೇನೆ. 12ಲಕ್ಷ ಎಕರೆಗೆ ನೀರು ಬಿಡದೆ ಕಟ್ಟೆಯ ಒಳಗೆ ಇಟ್ಟುಕೊಂಡಿರತಕ್ಕಂಥ ಪಾಪದ ಪರಿಸ್ಥಿತಿಯನ್ನು ಸೃಷ್ಟಿಮಾಡುವುದಕ್ಕೆ ನಾವೆಲ್ಲಾ ಕಾರಣಕರ್ತರಾಗಿದ್ದೇವೆ. The Government is totally divided Actually there is no Government.

ಎಲ್ಲದರಲ್ಲೂ ನಾವು ರಾಜಕಾರಣ ಮಾಡಬೇಕೇ? I am the last person to do politics. ಆದ್ದರಿಂದ ಇಂತಹ ಒಂದು ಸಂದರ್ಭದಲ್ಲಿ ಕಾನೂನು ಕೈ ಕೊಟ್ಟಿದೆ. ಪರಿಸ್ಥಿತಿ ನಮಗೆ ವಿರುದ್ಧವಾಗಿದೆ. ನಮ್ಮ ತಮಿಳುನಾಡಿನ ವಿರೋಧಿಗಳು ನಮ್ಮ ಮೇಲೆ ಗದಾಪ್ರಹಾರ ಮಾಡುವುದಕ್ಕೆ ಸನ್ನದ್ಧರಾಗಿ ನಿಂತಿದ್ದಾರೆ. ದೈವ ಕೂಡ ಮುನಿದಿದೆ. ಇಂತಹ ಪರಿಸ್ಥಿತಿಯಲ್ಲಿ ಈ ಸಮಸ್ಯೆಯನ್ನು ಬಗೆಬರಿಸಬೇಕಾದರೆ ನಾವು ಕಾನೂನಿನ ದೃಷ್ಟಿಯಿಂದ ತಾಂತ್ರಿಕ ದೃಷ್ಟಿಯಿಂದ ಮತ್ತು ರಾಜಕೀಯವಾದಂಥ ಈ ಮೂರು ದೃಷ್ಟಿಯಿಂದ ಕೂಡ ಇದನ್ನು ಸ್ಟ್ರಾಟ್‌ಜಿಡಿ ಎಂದು ಹೇಳುತ್ತೀರೋ ಅಥವಾ ವ್ಯವಸ್ಥೆ ಎಂದು ಹೇಳುತ್ತೀರೋ ನನಗೆ ಗೊತ್ತಿಲ್ಲ. ಇದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಕಾನೂನಿನ ಕ್ಷೇತ್ರದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಮತ್ತು ತಾಂತ್ರಿಕವಾಗಿ ಈ ಮೂರರಲ್ಲಿ ಕೂಡ ನಾವು ಈ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಸನ್ನದ್ಧರಾಗಬೇಕಾಗುತ್ತದೆ. ಆದರೆ ಇದು ರಾಜಕಾರಣದ ಪ್ರಶ್ನೆ ಆಗಿರುವುದರಿಂದ ಹೇಳಬೇಕೋ ಬಿಡಬೇಕೋ ನನಗೆ ಗೊತ್ತಿಲ್ಲ. ಮಾನ್ಯ ಅಧ್ಯಕ್ಷರೇ ಈಗಿನ ಪರಿಸ್ಥಿತಿಯಲ್ಲಿ ಇಂತಹ ಒಂದು ಗಂಭೀರವಾದ ಸಮಸ್ಯೆಯನ್ನು ನಾವು ವಿಶ್ಲೇಷಿಸಿ ಅದಕ್ಕೆ ಸಮರ್ಪಕವಾದ ಪರಿಹಾರವನ್ನು ದೊರಕಿಸಿಕೊಡಲಿಕ್ಕೆ ಈ ಸರ್ಕಾರಕ್ಕೆ ಶಕ್ತಿ ಇದೆ ಎಂದು ನಾನು ಭಾವಿಸಿಕೊಳ್ಳುವುದಿಲ್ಲ. ನಾಮಕಾವಸ್ತೆಗೆ ಸರ್ಕಾರ ಇದೆ. ನಾನು ಸಂವಿಧಾನದ ಪುಸ್ತಕ ತರಿಸಿ ನೋಡಿದೆ. ಏಕೆಂದರೆ ಎಲ್ಲಿಯವರೆಗೆ ಸರ್ಕಾರ ಇದೆ, ಸರ್ಕಾರ ಇದೆ ಎಂದು ಕೂಗಾಡುತ್ತಿದ್ದಂತೆ ನಾನು ಸಂವಿಧಾನದ ಪುಸ್ತಕ ತರಿಸಿದ ಸರ್ಕಾರ ಎಲ್ಲಲಿಯವರೆಗೆ ಇರುತ್ತದೆ ತಡೆಯಿರಿ ನೋಡೋಣ

ಎಂದು ಸಂವಿಧಾನದ ಪ್ರಕಾರ ಸರ್ಕಾರ ಇದೆ, ಮಂತ್ರಿಗಳೂ ಇದ್ದಾರೆ. ಉಪ ಮುಖ್ಯಮಂತ್ರಿಗಳು ಇದ್ದಾರೆ, ಮುಖ್ಯ ಮಂತ್ರಿಗಳು ಇದ್ದಾರೆ, ಸರ್ಕಾರವೂ ಇದೆ. ಆದರೆ ನಮ್ಮ ಹಳ್ಳಿಯ ಕಡೆ ನಾಮಕಾವಸ್ತೆ ಪಟೇಲ ಎಂದು ಹೇಳುತ್ತಾರೆ.

ಉಪಾಧ್ಯಕ್ಷರು :- ತಾವು ಮುಗಿಸಿ. ತಾವು ಈಗಾಗಲೇ 100 ನಿಮಿಷ ಮಾತನಾಡಿದ್ದೀರಿ. ಯಾರೂ ಇಷ್ಟು ವೇಳೆ ತೆಗೆದುಕೊಂಡಿಲ್ಲ. ಇನ್ನು ಮಾನ್ಯ ಸದಸ್ಯರು ಮಾತನಾಡುವವರಿದ್ದಾರೆ. ತಾವು ಸುದೀರ್ಘವಾಗಿ ಚರ್ಚೆಮಾಡಿದ್ದೀರಿ; ಮುಗಿಸಿ.

ಶ್ರೀ ವೈ.ಕೆ.ರಾಮಯ್ಯ :- ನಾನು ಇದರಲ್ಲಿ ರಾಜಕೀಯ ಮಾಡುವುದಿಲ್ಲ. ನಾನು ರಾಜಕೀಯ ಮಾಡುವುದರಲ್ಲಿ ಕೊನೆಯ ಮನುಷ್ಯ. ನನ್ನ ಆಸೆ ಇಷ್ಟೇ. ಈ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಈ ಜನರ ದುಃಖ ದುಮ್ಮಾನಗಳಿಗೆ ಸ್ಪಂದಿಸಲಿಕ್ಕೆ ಈ ಸರ್ಕಾರಕ್ಕೆ ರಾಜಕೀಯ ಇಚ್ಛಾಶಕ್ತಿ ಇದ್ದರೂ ಕೂಡ ಸದೃಢತೆ ಇಲ್ಲ. ನಿಮಗೆ ಇಚ್ಛಾಶಕ್ತಿಯೇ ಇಲ್ಲ. ಮೊದಲನೆಯದಾಗಿ ನಾನು ಈಗಾಗಲೇ ಹೇಳಿದ್ದೇನೆ ನಿಮ್ಮ ಪ್ರಾಮಾಣಿಕತೆಯನ್ನು ನಾನು ಪ್ರಶ್ನೆಮಾಡುತ್ತೇನೆ. ಆ ಪ್ರಾಮಾಣಿಕತೆ ಇದ್ದರೂ ಕೂಡ ಇವತ್ತು ಸನ್ಮಾನ್ಯ ವೀರಪ್ಪಮೊಯ್ಲಿಯವರ ನೇತೃತ್ವದ ಸರ್ಕಾರಕ್ಕೆ ಸದೃಢತೆ ಇಲ್ಲ. ಸದೃಢತೆ ಇಲ್ಲದೆ ಇರತಕ್ಕಂಥ ಈ ಸರ್ಕಾರಕ್ಕೆ ಕಾವೇರಿ ನೀರನ್ನು ಉಳಿಸಿಕೊಳ್ಳುವ, ಬಳಸಿಕೊಳ್ಳುವ ಮುಖಾಂತರ ಈ ರಾಜ್ಯದ ಜನರ ಹಿತವನ್ನು ಕಾಪಾಡುವಂತಹ ಶಕ್ತಿ ಇಲ್ಲ. ಇದನ್ನು ಹೇಳಬೇಕಾಗುತ್ತದೆ. ಎಷ್ಟು ಸಾರಿ ಹೇಳಿದರೂ ಕೇಳದಿದ್ದರೆ ಹೇಳಬೇಕಾಗುತ್ತದೆ. ನನಗೆ ಗೊತ್ತಿರುವ ಹಾಗೆ, ತಮ್ಮ ಪಕ್ಷದ ಶಾಸಕರು ನನ್ನ ಪ್ರಾಣದ ಮೇಲೆ ಹಲ್ಲೆ ಮಾಡಿದರು ಎಂದು ಹೇಳತಕ್ಕಂಥ ಮುಖ್ಯ ಮಂತ್ರಿಗಳು, ಇಂತಹ ಪರಿಸ್ಥಿತಿಯನ್ನು ಸೃಷ್ಟಿಮಾಡಿರಬೇಕಾದರೆ ಇನ್ನು ಈ ರಾಜ್ಯದ ರೈತರ ಹಿತವನ್ನು ಕಾಪಾಡುತ್ತಾರೆ ಎಂದು ನಾನು ಹೇಗೆ ಹೇಳಲಿ.

ಉಪಾಧ್ಯಕ್ಷರು :- ತಾವು ಸಾಕಷ್ಟು ಸಮಯ ಮಾತನಾಡಿದ್ದೀರಿ. ಏನು ಮಾಡಬೇಕು ಎಂದು ಹೇಳಿ ಮುಗಿಸಿ.

ಶ್ರೀ ವೈ.ಕೆ. ರಾಮಯ್ಯ :- ನಾನು ಎಲ್ಲೋ ಹೊರಗಡೆ ನಡೆದಿದ್ದು ಹೇಳುತ್ತಿಲ್ಲ.

ಉಪಾಧ್ಯಕ್ಷರು :- ತಾವು ಜಾಗ್ರತೆ ಮುಗಿಸಿ ಇನ್ನು ವೀರೇಂದ್ರ ಪಾಟೀಲರು ಮಾತನಾಡಬೇಕಾಗಿದೆ. ತಾವು ಈಗಾಗಲೇ ಸಾಕಷ್ಟುವೇಳೆ ತೆಗೆದುಕೊಂಡಿದ್ದೀರಿ.

ಶ್ರೀ ವೈ.ಕೆ.ರಾಮಯ್ಯ - ನಾನು ಈ ರಾಜ್ಯದ ಜನರ ಹಿತವನ್ನು ಕಾಪಾಡುವುದಕ್ಕೆ ಈ ಸರ್ಕಾರಕ್ಕೆ ಶಕ್ತಿ ಇಲ್ಲ ಎಂದು ಹೇಳುವಾಗ ಇದನ್ನು ಹೇಳಲೇಬೇಕಾಗುತ್ತದೆ.

ಉಪಾಧ್ಯಕ್ಷರು :- ಈಗಾಗಲೇ ಇದನ್ನು 10 ಸಾರಿ ಹೇಳಿದ್ದೀರಿ.

ಶ್ರೀ ವೈ.ಕೆ.ರಾಮಯ್ಯ :- ನಾನು ಇದನ್ನು ಮೊದಲನೇ ಸಲ ಹೇಳುತ್ತಿದ್ದೇನೆ. ಬೇರೆ ಎಲ್ಲಾ ಹೇಳಿದ್ದೇನೆ. ದುಡ್ಡು ಕೊಟ್ಟಿಲ್ಲ ಎಂದು ಹೇಳಿದ್ದೇನೆ, ಕೆಲಸ ಮಾಡಿಲ್ಲ ಎಂದು ಹೇಳಿದ್ದೇನೆ. ಆದರೆ ರಾಜಕೀಯವಾದ ದೃಢತೆ ಇಲ್ಲ, ಆದ್ದರಿಂದ ಇವರು ಸಡ್ಡೆಯವರಲ್ಲ, ಇವರು ಈ ರಾಜ್ಯದ ಜನರ ಹಿತವನ್ನು ಕಾಪಾಡುವುದಕ್ಕೆ ಶಕ್ತರಲ್ಲ, ಇವರು ನಿರಾಶಕ್ತರಾಗಿದ್ದಾರೆ, ನಿರ್ವೀರ್ಯರಾಗಿದ್ದಾರೆ, ರಾಜಕೀಯವಾಗಿ ಶಕ್ತಿ ಇಲ್ಲ ಎನ್ನತಕ್ಕಂಥ ಮಾತನ್ನು ಹೇಳುವಾಗ ನಾನು ಇದನ್ನು ಹೇಳಿಲೇಬೇಕಾಗುತ್ತದೆ. ನನಗೆ ಅವರ ಗುಂಪಿನ ಬಗ್ಗೆಆಸಕ್ತಿ ಇಲ್ಲ. ಅವರು ಹೋಗುತ್ತಾರೆ, ಇನ್ನೊಬ್ಬರು ಬರುತ್ತಾರೆ, ನಾವ್ಯಾರು ಆಗುವುದಿಲ್ಲ. ನನ್ನ ಆಸೆ ಇಷ್ಟೇ. ರಾಜಕೀಯವಾಗಿ ಶಕ್ತಿ ಇಲ್ಲದೆ ಇರುವಂತಹ ಸಂದರ್ಭದಲ್ಲಿ ಇವರಿಗೆ ಸಮಸ್ಯೆಯನ್ನು ನಿಭಾಯಿಸಲಿಕ್ಕೆ ಸಾಧ್ಯವಾಗುತ್ತಿಲ್ಲವೆಂದು ನಾನು ಹೇಳುತ್ತೇನೆ. ಇನ್ನು ಕೊನೆಯದಾಗಿ,

ಒಂದು ಮಾತು ಹೇಳಿ ನಾನು ಮುಗಿಸುತ್ತೇನೆ. ಕಾವೇರಿ ಜಲವಿವಾದದ ಇತ್ತೀಚಿನ ತೀರ್ಪಿನಿಂದ ಯಾರಿಗಾದರೂ ಹೆಚ್ಚಿನ ಅನ್ಯಾಯವಾಗಿದ್ದರೆ ಅದು ತುಮಕೂರು ಜಿಲ್ಲೆಯ ಜನರಿಗೆ. 205 ಟಿ.ಎಂ.ಸಿ. ನೀರನ್ನು ತಮಿಳುನಾಡಿಗೆ ಕಂತಿನ ಪ್ರಕಾರ ಬಿಟ್ಟುಕೊಡಬೇಕೆಂದು ಏನು ತೀರ್ಪು ಇದೆಯೋ ಈ ತೀರ್ಪಿನಿಂದ ಯಾರಿಗೆ ಅನ್ಯಾಯವಾಗಿದೆ ಎಂದರೆ ಅದು ನಮಗೆ. ಮಂಡ್ಯ ಜಿಲ್ಲೆಯವರಿಗೆ ಕಾವೇರಿ ನದಿ ಪಾತ್ರದಲ್ಲಿ ಎಷ್ಟುಅಚ್ಚುಕಟ್ಟು ಆಗಬೇಕಾಗಿತ್ತೋ ಅಷ್ಟು ಆಗಿದೆ. ಹಾಸನ ಜಿಲ್ಲೆಯವರಿಗೆ ಎಷ್ಟು ಅಚ್ಚುಕಟ್ಟು ಆಗಬೇಕಾಗಿತ್ತೋ ಅಷ್ಟು ಆಗಿದೆ. ಅವರು ಇದೇ ಪರಿಸ್ಥಿತಿ ಮುಂದುವರಿದರೆ ಸ್ವಲ್ಪ ಉತ್ತಮ ಎಂದು ತಿಳಿದುಕೊಳ್ಳುತ್ತಾರೆ. ಏಕೆಂದರೆ ಒಂದು ಬೆಳೆ ಬೆಳೆಯುವ ಬದಲಾಗಿ ಮೂರು ಬೆಳೆ ಬೆಳೆದುಕೊಳ್ಳಬಹುದು ಎಂದು ಅವರ ಇಚ್ಛೆ . ತುಮಕೂರಿಗೆ ಕಿತ್ತು ಬಿಟ್ಟುಬಿಟ್ಟರೆ ಅವರು ಒಂದೇ ಬೆಳೆ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಡೀಪ್ ಕಟ್ ಕೆಲಸ ಮಾಡದೆ ಇದ್ದರೆ ಮೂರು ಮೂರು ಬೆಳೆ ಬೆಳೆದುಕೊಳ್ಳುತ್ತಾ ಇರಬಹುದು. ಆದ್ದರಿಂದ ಈ ಒಂದು ತೀರ್ಪಿನಿಂದ ಯಾರಿಗಾದರೂ ನಿರ್ದಿಷ್ಟವಾದ ಅನ್ಯಾಯ ಕಣ್ಣಿಗೆ ಕಾಣುವಂತಹ ಅನ್ಯಾಯವಾಗಿದ್ದರೆ ತುಮಕೂರು ಜಿಲ್ಲೆಯ ಜನತೆಗೆ. ಆ 205 ಟಿ.ಎಂ.ಸಿ ನೀರನ್ನು ನೀವು ಶ್ರೀಮತಿ ಜಯಲಲಿತಾ ಅವರಿಗೆ ಬಿಟ್ಟುಕೊಡಬೇಕು. ಇಲ್ಲವೇ ತುಮಕೂರು ಜಿಲ್ಲೆಯಲ್ಲಿ 4 ಲಕ್ಷ ಎಕರೆ ಒಣಗಿರುವ ಜಮೀನಿಗೆ ಬಿಟ್ಟುಕೊಡಬೇಕು ಇಷ್ಟೇ ಪ್ರಮುಖವಾದ ಪ್ರಶ್ನೆ ಇರುವುದು. ನಾನು ಇಷ್ಟೇಲ್ಲಾ ಶ್ರಮ ಪಡುತ್ತಿರುವುದು ಆದಕ್ಕೆ. ನನ್ನ ಹೋರಾಟ ಇದಕ್ಕೆ. ನಮಗೆ ತಾವು ಸ್ವಲ್ಪ ಸಹಾಯ ಮಾಡಿದರೆ, ತಾವು ಸ್ವಲ್ಪ ಆಸಕ್ತಿ ವಹಿಸಿದರೆ ಸ್ವಲ್ಪ ಹಣ ಕೊಟ್ಟರೆ ನಮ್ಮ ಕಡೆ ಸ್ವಲ್ಪ ಕರುಣೆ ತೋರಿಸಿದರೆ ಆ 4ಲಕ್ಷ ಎಕರೆಗೆ ಶಿಂಶಾ ನದಿ ಪಾತ್ರಕ್ಕೆ ನೀರು ಬರುವಂತಹ ಕೆಲಸವನ್ನು ಇನ್ನು 3-4 ತಿಂಗಳಲ್ಲಿ ಮಾಡುವುದಕ್ಕೆ ಸಾಧ್ಯ ಇದೆ. ಅದಕ್ಕಾಗಿ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ದೃಷ್ಟಿಯಿಂದ ಶುಕ್ಲಾರವರು ಏನು ಹೇಳಿದ್ದಾರೆ, ವೀರಪ್ಪಮೊಯ್ಲಿಯವರು ಏನು ಹೇಳಿದ್ದಾರೆ ಇದು ನಡೆಯುತ್ತಾ ಇರುತ್ತದೆ. ಇದು ಯಾರ ಕಾಲಕ್ಕೂ ಮುಗಿಯುವುದಿಲ್ಲ. ತಮಿಳುನಾಡಿನ ಮರುಸಳ್ಳಿ ಮನೋಹರನ್ ಎಂದು ಯಾರೋ ಒಬ್ಬರು ಇದ್ದರು. ಆಗಲೂ ಕೂಡ ಹೀಗೆ ಆಯಿತು. ಈಗ ಶುಕ್ಲಾರವರ ಮೇಲೆ ಹೇಳುತ್ತೇವೆ. ಅದು ಏನಾದರೂ ಆಗಿಕೊಂಡು ಹೋಗಲಿ. ಅದರ ಬಗ್ಗೆ ನನ್ನ ಆಸಕ್ತಿ ದೊಡ್ಡದಲ್ಲ. ನನ್ನ ಆಸಕ್ತಿ ಇಷ್ಟೇ. ಕಾವೇರಿ ನೀರಿನ ಹಕ್ಕು ಉಳಿಸಿಕೊಳ್ಳಲಿಕ್ಕೆ ಒಂದು ಕಡೆ ಹೋರಾಟ ನಡೆಯುತ್ತಿರಲಿ. ಅದಕ್ಕೆ ನೀವು ಏನು ತೀರ್ಮಾನ ತೆಗೆದುಕೊಂಡರೂ ಕೂಡ ನಾವು ವಿರೋಧಪಕ್ಷದಿಂದ ನಿಮ್ಮ ಬೆಂಬಲಕ್ಕೆ ನಿಲ್ಲುತ್ತೇವೆ. ನಮ್ಮ ತಕರಾರು ಏನಿದೆ ಎಂದರೆ ನಿಮ್ಮ ಮೇಲೆ ನಮ್ಮ ಕೋಪ ಏನೆಂದರೆ, ಅದು ಎಷ್ಟೋ ವರ್ಷಗಳ ಕಾಲ ಹೋರಾಟ ನಡೆಯುತ್ತಾ ಇರುತ್ತದೆ. ನೀವು ಈ ಕೆಲಸವನ್ನು ಪ್ರಗತಿ ರೂಪದಲ್ಲಿ ತರುತ್ತಿಲ್ಲ ಎಂದು. ಆದ್ದರಿಂದ ಹೋರಾಟ ಅದರ ಪಾಡಿಗೆ ಅದು ನಡೆಯಲಿ. ಆದರೆ ನೀರನ್ನು ಬಳಸಿಕೊಳ್ಳತಕ್ಕಂಥ ಕೆಲಸವನ್ನು ತ್ವರಿತಗೊಳಿಸಿ ಎಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಂಡು, ಇಷ್ಟು ವಿಷಯವನ್ನು ಪ್ರಸ್ತಾಪ ಮಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ : (ಚಿಂಚೋಳಿ) ಮಾನ್ಯ ಉಪಾಧ್ಯಕ್ಷರೇ, ತಮ್ಮ ಅನುಮತಿಯನ್ನು ಕೋರಿ ನಾನು ಕುಳಿತಲ್ಲಿಂದಲೇ ಮಾತನಾಡ ಬೇಕಾಗಿದೆ. ಏಕೆಂದರೆ, ಇನ್ನೂ ನನಗೆ ನಿಂತು ಮಾತನಾಡುವುದಕ್ಕೆ ಬರುವುದಿಲ್ಲ. ಅದಕ್ಕಾಗಿ ತಮ್ಮ ಅಪ್ಪಣೆಯನ್ನು ಈ ಬಗ್ಗೆ ಕೇಳಿಕೊಳ್ಳುತ್ತೇನೆ. ಕಾವೇರಿ ಜಲವಿವಾದದ ಬಗ್ಗೆ ಈ ಸದನದಲ್ಲಿ ನಾನು ಎರಡು ಸಲ ಚರ್ಚೆಯಲ್ಲಿ ಭಾಗವಹಿಸಿದ್ದೇನೆ. ಇವೊತ್ತು ಭಾಗವಹಿಸುತ್ತಾ ಇರುವುದು ಮೂರನೇ ಸಾರಿ. ಮೊದಲ ಎರಡು ಸಲ ನಡೆದ ಚರ್ಚೆಯಲ್ಲಿ

ನನ್ನ ವಿಚಾರಗಳನ್ನು ನಾನು ವ್ಯಕ್ತ ಮಾಡಿದ್ದೇನೆ. ಆದ್ದರಿಂದ ಇವೊತ್ತು ಆಗ ಪ್ರಸ್ತಾಪ ಮಾಡಿದಂಥ ವಿಚಾರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರ ಮೂಲಕ ಸದನದ ಸಮಯವನ್ನು ಕಳೆಯುವುದಕ್ಕೂ ಹೋಗುವುದಿಲ್ಲ. ಈಗ ಮೂರನೇಯ ಬಾರಿಗೆ ಕಾವೇರಿ ಜಲವಿವಾದದ ಬಗ್ಗೆ ನಾನು ಮಾತನಾಡುತ್ತಾ ಇದ್ದೇನೆ. ಕಾವೇರಿ ನೀರಿನ ಪ್ರಶ್ನೆ ಎಂಬುದು ನಮ್ಮ ರಾಜ್ಯದ ಪ್ರಶ್ನೆಯೇ ಹೊರತು ಯಾವುದೇ ಒಂದು ಪಕ್ಷದ ಪ್ರಶ್ನೆಯಲ್ಲ. ಆದಕ್ಕಾಗಿ ನಾನು ಮಾನ್ಯ ಮೊಯಿಲಿಯವರಿಗೆ ಒಂದು ಕಿವಿ ಮಾತನ್ನು ಹೇಳಬೇಕಾಗಿದೆ. ಏನೆಂದರೆ, ಆವರು ವಿರೋಧ ಪಕ್ಷದ ಎಲ್ಲಾ ನಾಯಕರನ್ನು ಮತ್ತು ನಮ್ಮ ಪಕ್ಷದ ಎಲ್ಲಾ ಮುಖ್ಯನಾಯಕರನ್ನು ವಿಶ್ವಾಸದಲ್ಲಿ ತೆಗೆದುಕೊಂಡು, ಮೇಲಿಂದ ಮೇಲೆ ಕಾವೇರಿ ವಿವಾದದ ಬಗ್ಗೆ ಚರ್ಚೆ ಮಾಡಬೇಕೆಂಬ ಸಲಹೆಯನ್ನು ಮಾಡುತ್ತೇನೆ. ಆವರು ನನ್ನ ಈ ಮಾತಿಗೆ ಗಮನ ಕೊಡಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಈ ಕಾವೇರಿ ಬಗ್ಗೆ ನಮ್ಮ ಮತ್ತು ತಮಿಳುವನಾಡಿನವರ ನಡುವೆ ವಿವಾದ ಉದ್ಭವಿಸಿ 100 ವರ್ಷಗಳಿಗೂ ಮೇಲಾಯಿತು. ಆದರೆ ಮೊನ್ನೆ ತಮಿಳುನಾಡಿನ ಮುಖ್ಯ ಮಂತ್ರಿಯವರು ಒಮ್ಮಿಂದೊಮ್ಮೆಗೆ ಉಪವಾಸ ಸತ್ಯಗ್ರಹ ಕುಳಿತರು. ಕಾವೇರಿ ಟ್ರಿಬ್ಯುನಲ್ ಏನು ನಿರ್ಣಯವನ್ನು ಕೊಟ್ಟಿದೆ, ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಕೇಂದ್ರ ಸರಕಾರದವರು ಪಾಸ್ ಕೊಟ್ಟಿದ್ದರು. ಆದರೆನಾನು ಒಬ್ಬ ಸದಸ್ಯನಾಗಿ ಆವರನ್ನು ಕೇಳುವಂಥಾದ್ದು ಏನೆಂದರೆ, ಈ ಪ್ರಶ್ನೆ 100 ವರ್ಷಗಳಿಂದ ಬಗೆಹರಿದಿಲ್ಲ. ಎಂದ ಮೇಲೆ ಒಂದು ಉಪವಾಸದಿಂದ ಈ ಪ್ರಶ್ನೆ ಬಗೆಹರಿಸಿಯುತ್ತದೆ ಎಂದು ನಾನಂತೂ ತಿಳಿದುಕೊಂಡಿಲ್ಲ. ಅಷ್ಟೇ ಅಲ್ಲ, ಎಲ್ಲಾ ಸಮಯವನ್ನು ಬಿಟ್ಟು ಈ ಸಮಯದಲ್ಲಿ ಉಪವಾಸ ಕುಳಿತುಕೊಳ್ಳುವ ಅವಶ್ಯಕತೆಯಾದರೂ ಏನಿತ್ತು ಎಂಬುದು ನನಗೆ ಗೊತ್ತಿಲ್ಲ. ಬಹುಶಃ ಆವರು ಉಪವಾಸ ಕುಳಿತು ಕೇಂದ್ರ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡಿದರು ಎಂದು ಕಾಣುತ್ತದೆ. ಹೀಗೆ ಉಪವಾಸ ಸತ್ಯಾಗ್ರಹದ ಮೂಲಕ ಏನು ಪ್ರಯತ್ನ ಮಾಡಿದರು, ಆ ಸಮಯದಲ್ಲಿ ಕೇಂದ್ರ ಸರಕಾರದ ಮುಂದೆ ಹಲವಾರು ಸಮಸ್ಯೆಗಳು ಇದ್ದುವು. ಒಂದುವೇಳೆ ತಮಿಳುನಾಡಿನ ಎಡಿಎಂಕೆ ಪಕ್ಷದವರು ಕೇಂದ್ರ ಸರಕಾರಕ್ಕೆ ತಮ್ಮ ಬೆಂಬಲವನ್ನು ಕೊಟ್ಟರೆ ಕೇಂದ್ರ ಸರಕಾರ ಉಳಿಯುತ್ತದೆ ಎಂಬ ಒಂದು ವಿಚಾರ ಇತ್ತು ಅದಕ್ಕಾಗಿ ಆವರು ಹಂಗರ್‌ಸ್ಟ್ರೈಕ್ ಕುಳಿತರು ಎಂದು ಕಾಣುತ್ತದೆ. ಆವರ ಡಿಮ್ಯಾಂಡ್ ಏನಿತ್ತು ಅಂದರೆ, ತಮಿಳುನಾಡಿನ ಮುಖ್ಯಮಂತ್ರಿಯವರು ಏನು ಹೇಳಿದ್ದರು ಅಂದರೆ, ಟ್ರಿಬ್ಯೂನಲ್‌ನವರು ಇಂಟರಿಂ ಆವಾರ್ಡ್ ಏನು ಕೊಟ್ಟಿದ್ದಾರೆ, ಅದು ಫೈನಲ್ ಆಲ್ಲ. ಅದನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಆವರು ಕೇಂದ್ರ ಸರಕಾರದ ಮೇಲೆ ಪ್ರೆಶರ್ ತಂದರು. ಆದರೆ ಟ್ರಿಬ್ಯುನಲ್‌ನವರು ಆವಾರ್ಡ್ ಕೊಟ್ಟರು 1992ರಲ್ಲಿ ಕರ್ನಾಟಕ ಸರಕಾರದವರು ಆದಕ್ಕೆ ಒಂದು ಕ್ಲಾರಿಫಿಕೇಶನ್ ಕೇಳಿದ್ದರು. ಆದಕ್ಕೆ ಕ್ಲಾರಿಫೈ ಮಾಡಿತ್ತು. ಅಂದಮೇಲೆ ಯಾವ ಆಧಾರಟಿ ಇಂಪ್ಲಿಮೆಂಟ್ ಮಾಡಬೇಕು? ಕೇಂದ್ರಸರ್ಕಾರ ಇಂಪ್ಲಿಮೆಂಟ್ ಮಾಡಬೇಕೆಂದರೆ ಮೊದಲನೇ ಇಂಟರಿಂ ಆವಾರ್ಡ್ ಇಂಪ್ಲಿಮೆಂಟ್ ಮಾಡಬೇಕೋ ಆಥವಾ ಮಾಡಿಫೈಡ್ ಇಂಟರಿಂ ಆವಾರ್ಡ್ ಇಂಪ್ಲಿಮೆಂಟ್ ಮಾಡಬೇಕೋ ಯಾವುದೂ ಹೇಳಲಿಕ್ಕೆ ಆವರು ತಯಾರಿಲ್ಲ, ಆವರು ಹೇಳಲೇ ಇಲ್ಲ. ನಿಮಗೆ ಹೇಳಬೇಕಾದರೆ ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟ್ ಆಕ್ಟ್ 1956-ನನ್ನ ಹತ್ತಿರ ಇದೆ, ನಾನು ಇವತ್ತು ತಂದಿದ್ದೇನೆ ಅದರಲ್ಲಿ ಏನು ಹೇಳುತ್ತಾರೆ ಅಂದರೆ, ಒಂದು ಡಿಸಿಶನ್ ಮಾಡಿಫೈ ಆದರೆ modified decision is the final decision ಎಂದು ಸ್ಪಷ್ಟವಾಗಿ ಆಕ್ಟ್‌ನಲ್ಲಿ ಹೇಳಿದ್ದಾರೆ. ಇದು ಪಾರ್ಲಿಮೆಂಟ್ ಪಾಸ್‌ಮಾಡಿದ್ದೇ ಹೊರತಾಗಿ ಕೇಂದ್ರ ಸರ್ಕಾರ ಪಾಸ್ ಮಾಡಿದ ಆಕ್ಟ್‌ಲ್ಲ. ಅಂದಮೇಲೆ ಪಾರ್ಲಿಮೆಂಟ್ ಇಸ್ ಸುಪ್ರೀಂ. ಅಂದಮೇಲೆ ನಾನು ಕೇಳುವುದು ಇಷ್ಟೇ. ಇವತ್ತು

ತಮಿಳುನಾಡು ಸರ್ಕಾರದವರು ಏನು ಹಂಗರ್‌ಸ್ಟ್ರೈಕ್ ಎಂದು ಮಾಡಿದರು ಅದು ಏತರ ಸಲುವಾಗಿ? ಏನು ಇಂಟರಿಂ ಅವಾರ್ಡ್ ಇಂಪ್ಲಿಮೆಂಟ್ ಮಾಡಿ ಅಂತಾನೋ, ಮಾಡಿಫೈಡ್ ಇಂಟರಿಂ ಅವಾರ್ಡ್ ಇಂಪ್ಲಿಮೆಂಟ್ ಮಾಡಬೇಕು ಅಂತಾನೋ ಅದ್ಯಾವುದೂ ಸ್ಪಷ್ಟಮಾಡಲಿಲ್ಲ. ಮತ್ತು ಒಂದು ವಿಚಾರ ನಾನು ಸ್ಪಷ್ಟಮಾಡಬೇಕೆಂದರೆ ಕಾನೂನಿನಲ್ಲಿ ಇಂಟರಿಂ ಅವಾರ್ಡ್ ಕೊಡುವುದಕ್ಕೆ ಅವಕಾಶ ಇಲ್ಲ, ಟ್ರೈಬ್ಯುನಲ್ ಫೈನಲ್ ಡಿಸಿಶನ್ ಕೊಡಬಹುದು ಆದರೆ ಇಂಟರಿಂ ಅವಾರ್ಡ್ ಕೊಡಲು ಅವಕಾಶ ಇಲ್ಲ ಎನ್ನುವ ಮಾತನ್ನು ಅವರೇ ಒಪ್ಪಿಕೊಂಡಿದ್ದಾರೆ. ನಮಗೆ ಈ ಅಧಿಕಾರ ಇಲ್ಲ, ಇಂಟರಿಂ ಅವಾರ್ಡ್ ಕೊಡುವ ಅಧಿಕಾರ ಇಲ್ಲವೆಂದು ಟ್ರಿಬ್ಯುನಲ್ ಒಪ್ಪಿಕೊಂಡಿದೆ. ಆದರೂ ಸುಪ್ರೀಂ ಕೋರ್ಟಿನವರು ನಿಮಗೆ ಅಧಿಕಾರವಿದೆ, ಇಂಟರಿಂ ಅವಾರ್ಡ್ ಕೊಡಿ ಎಂದು ಹೇಳಿದರು. ಕಾನೂನು ವಿರುದ್ಧ ಸುಪ್ರೀಂ ಕೋರ್ಟ್ ಹೇಳಲಿ, ಟ್ರಿಬ್ಯುನಲ್ ಹೇಳಲಿ, ಅಥವಾ ಕೇಂದ್ರ ಸರ್ಕಾರ ಹೇಳಲಿ. ಕಾನೂನು ವಿರುದ್ಧ ಯಾರು ಹೇಳಿದರೂ ಕೂಡ ಅದನ್ನು ಇಂಪ್ಲಿಮೆಂಟ್ ಮಾಡುವುದಿಲ್ಲವೆಂದು ನನಗನ್ನಿಸುತ್ತದೆ.ಅದಕ್ಕಾಗಿ ಪ್ರಶ್ನೆ ಏನು ಅಂದರೆ, ಇಂಟರಿಂ ಅವಾರ್ಡ್ ಕೊಡುವಂತಹ ಅಧಿಕಾರ ಟ್ರೈಬ್ಯುನಲ್‌ಗಿಲ್ಲ. ಎರಡನೆಯದು ಟ್ರಿಬ್ಯುನಲ್ ಇಂಟರಿಂ ಅವಾರ್ಡ್ ಕೊಟ್ಟರೂ 92ರಲ್ಲಿ ಕ್ಲಾರಿಫೈಮಾಡಿ ಅವಾರ್ಡ್ ಮಾಡಿಫೈ ಮಾಡಿದರು. ಈಗ ತಮಿಳುನಾಡು ಸರ್ಕಾರದವರು ಇಂಟರಿಂ ಅವಾರ್ಡ್ ಇಂಪ್ಲಿಮೆಂಟ್ ಮಾಡಿ ಎನ್ನುತ್ತಾರೋ ಅಥವಾ ಮಾಡಿಫೈಡ್ ಅವಾರ್ಡ್ ಇಂಪ್ಲಿಮೆಂಟ್ ಮಾಡಿ ಎನ್ನುತ್ತಾರೋ ಅವರು ತಮ್ಮ ಡಿಮಾಂಡ್‌ನಲ್ಲಿ ಏನು ಹೇಳಿದ್ದಾರೆ ಎಂದು ನಮಗಿನ್ನೂ ಗೊತ್ತಿಲ್ಲ. ಶ್ರೀ ಮೊಯ್ಲಿಯವರಾಗಲಿ, ಶ್ರೀ ಕೃಷ್ಣ ಅವರಾಗಲಿ ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ತಮಿಳುನಾಡಿನವರು ಏನು ಬೇಡಿದ್ದಾರೆ ಎಂದು ಸ್ಪಷ್ಟವಾಗಿ ಹೇಳಬೇಕು. ನನಗೆ ಗೊತ್ತಿದ್ದ ಹಾಗೆ ಕೇಂದ್ರಸರ್ಕಾರಕ್ಕೆ ಇಂಟರ್ ಸ್ಟೇಟ್ ರಿವರ್ ವಾಟರ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ ಎರಡು ಅಧಿಕಾರ ಇದೆ. ಒಂದನೆಯದು ಟ್ರಿಬ್ಯುನಲ್ ಮಾಡಬಹುದು, ಎರಡನೆಯದು ಟ್ರಿಬ್ಯೂನಲ್ ಡಿಸಿಶನ್ ಕೊಟ್ಟಿದ್ದು ನೋಟಿಫೈ ಮಾಡಬೇಕು ಮತ್ತು ಸರ್ಕಾರಿ ಗಜೆಟ್‌ನಲ್ಲಿ ಅದನ್ನು ಪಬ್ಲಿಶ್ ಮಾಡಬೇಕೆಂಬುದು- ಇವೆರಡು ಬಿಟ್ಟರೆ ಫೈನಲ್ ಡಿಸಿಶನ್ ಬರುವತನಕ ಕೇಂದ್ರ ಸರ್ಕಾರ ಏನೂ ಮಾಡಲಿಕ್ಕೆ ಬರೋದಿಲ್ಲ ಎಂದು ನನಗೆ ಗೊತ್ತಿರುವುದನ್ನು ತಮ್ಮ ಮುಂದೆ ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರದವರು ಕಾವೇರಿ ವಿವಾದದ ಬಗ್ಗೆ ಎರಡು ಸಲ ಕಣ್ಣು ತೆರೆದಿದ್ದಾರೆ. ಅದಕ್ಕೂ ಮೊದಲು ಒಂದು ವಿಚಾರ ನಾನು ಹೇಳಬೇಕಾಗುತ್ತದೆ, ನಿಮ್ಮಗೆಲ್ಲ ಗೊತ್ತಿತ್ತು, ನಿಮ್ಮ ಅನುಭವಕ್ಕೆ ಬಂದಂತಹ ವಿಚಾರ. ನಾನು ಪೇಪರನಲ್ಲಿ ಓದಿರೋ ವಿಚಾರ -ಈ ಸದನ ಒಂದು ರೆಸಲ್ಯೂಶನನ್ನು ಯೂನಾನಿಮಸಾಗಿ ಪಾಸ್ ಮಾಡಿತ್ತು . ಆವಾಗ ಶ್ರೀ ಕೃಷ್ಣ ಅವರು ಸ್ಪೀಕರ್ ಆಗಿದ್ದರು. ಏನಂತ ರೆಸಲ್ಯೂಶನ್ ಮಾಡಿದಿರಿ ಅಂದರೆ ಇದೇನು ಇಂಟರಿಂ ಅವಾರ್ಡ್ ಟ್ರೈಬ್ಯುನಲ್ ಕೊಟ್ಟಿದೆ, ಇದು ಗೆಜೆಟ್ ಮಾಡಬೇಡ್ರಿ ಪಬ್ಲಿಶ್ ಮಾಡಬೇಡ್ರಿ ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳಬೇಕೂಂತ ಒಂದು ಡಿಸಿಶನ್ ಆಯಿತು. ಇಲ್ಲಿ ಎಲ್ಲಾ ಪಕ್ಷದವರೂ ಒಪ್ಪಿಕೊಂಡು ಯುನಾನಿಮಸಾಗಿ ರೆಸಲ್ಯೂಶನ್ ಪಾಸ್ ಮಾಡಿದರು. ಆಗಿನ ಮುಖ್ಯಮಂತ್ರಿಗಳು ನಮ್ಮ ಪಾರ್ಟಿಯ

5.05 ಪಿ.ಎಂ

ಕೆಲವು ಮುಖ್ಯಸ್ಥರನ್ನು ವಿರೋಧ ಪಕ್ಷದ ಕೆಲವರನ್ನು ದೆಹಲಿಗೆ ಡೆಲಿಗೇಶನ್ ತೆಗೆದುಕೊಂಡು ಹೋದರು. ದೆಹಲಿಗೆ ಹೋಗಿ ಅವರು ಪ್ರಧಾನ ಮಂತ್ರಿಯವರ ತಲೆಯ ಮೇಲೆ ಮೈಸೂರಿ ಟರ್ಬನ್ ಇಟ್ಟರು. ಆಗ ಪ್ರಧಾನ ಮಂತ್ರಿಗಳು ನನಗೇನು ಗೌರವ ತರುವುದಕ್ಕೆ ಬಂದಿದ್ದಿರೋ ಅಥವಾ ನಿಮ್ಮದೇನಾದರೂ ವಿಚಾರಣೆ ಅಥವಾ ಗ್ರೀವೆನ್ಸ್ ಇದ್ದರೆ ಹೇಳುವುದಕ್ಕೆ ಬಂದಿದ್ದಿರೋ ಅಂತ

ಹೇಳಿದರು. ಇಲ್ಲ ಈ ರೀತಿ ರೆಸಲ್ಯೂಶನ್ ಮಾಡಿದ್ದೇವೆ. ಅದಕ್ಕೆ ನಾವು ಬಂದಿದ್ದೇವೆ ಅಂತ ಹೇಳಿದೆವು,ಕೊನೆಗೆ ಏನಾಯಿತು ಅಂದರೆ, 3-4 ದಿವಸದಲ್ಲಿ ನಿಮಗೆ ಹೇಳಬೇಕಾಗಿತ್ತು ಅಂದರೆ, ಟ್ರಿಬ್ಯುನಲ್ ಇಂಟರಿಂ ಅವಾರ್ಡ್ ಗೆಜೆಟ್ ಆಯಿತು. ನೀವು ಯುನಾನಿಮಸ್ ಆಗಿ ರೆಸಲ್ಯೂಷನ್ ಮಾಡಿದ ಪರಿಣಾಮ ಏನಾಯಿತು ಎಂದರೆ, ಕೇಂದ್ರ ಸರ್ಕಾರದವರು 4 ದಿವಸದಲ್ಲಿ ಆ ಇಂಟರಿಮ್ ಡಿಸಿಷನ್‌ನನ್ನು ಪಬ್ಲಿಷ್ ಮಾಡಿದರು. ಅಂದರೆ ಅದರ ಅರ್ಥ, ಈ ರೆಸಲ್ಯೂಷನ್ ಮಾಡಿದ್ದು ಕೂಡ ಕೇಂದ್ರ ಸರ್ಕಾರದವರು ಗಮನಕ್ಕೆ ತೆಗೆದುಕೊಂಡಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ. ಇದಾದಮೇಲೆ ಕೇಂದ್ರ ಸರ್ಕಾರ ಎರಡು ಸಲ ಕಣ್ಣು ತೆರೆದಿದೆ. ಮೊದಲನೆಯ ಸಲ ಕಣ್ಣು ತೆರೆದಿದ್ದು ಏನೆಂದರೆ, ಇದು ಪಬ್ಲಿಶ್ ಮಾಡಿದ ಕೂಡಲೆ ಈ ಗಲಾಟೆ ಶುರುವಾಯಿತು. ಬೆಂಗಳೂರಿನಲ್ಲಿ ಗಲಾಟೆ ಶುರುವಾಯಿತು. ಬೆಂಗಳೂರಿನಲ್ಲಿ 4-5 ಜನ ಸತ್ತರು. ಇದಾದಮೇಲೆ ಈ ಗಲಾಟೆ ಶುರುವಾಯಿತು, ಒಂದು ಕಡೆ ಆಯಿತು ಅಂದರೆ ಎಲ್ಲ ಕಡೆ ಆಗಬಹುದು ಎಂದು ಆ ವೇಳೆಗೆ ಪ್ರಧಾನಿ ಮಂತ್ರಿಯವರೇ ಎಲ್ಲ ರಾಜ್ಯದ ಮುಖ್ಯಮಂತ್ರಿಗಳಿಗೆ ಟೆಲಿಫೋನ್ ಮಾಡಿ ನೀವು ಬರಬೇಕು, ಕಾವೇರಿ ವಿವಾದದ ಬಗ್ಗೆ ನಾನು ಪ್ರಯತ್ನ ಮಾಡುತ್ತೇನೆ ನೀವೆಲ್ಲರೂ ಬನ್ನಿ ಎಂದು ಹೇಳಿದರು. ಆಗ ಎಲ್ಲ ರಾಜ್ಯದ ಮುಖ್ಯಮಂತ್ರಿಗಳು ಹೋದರು. ಆಗ ಒಮ್ಮೆ ಕಣ್ಣನ್ನು ತೆರೆದರು. ನನಗೆ ಇನ್ನೂ ನೆನಪು ಇದೆ. ಕಾವೇರಿ ಜಲ ವಿವಾದದ ಡಿಸ್‌ಕಷನ್‌ನಲ್ಲಿ ಭಾಗವಹಿಸುವಂತಹ ಸಂದರ್ಭದಲ್ಲಿ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಇದು ನೂರು ವರ್ಷದ ಹಿಂದಿನದು ನಮ್ಮದು ಮತ್ತು ತಮಿಳುನಾಡಿನ ನೂರು ವರ್ಷದ ವಿವಾದ ಒಂದು ಮೀಟಿಂಗ್‌ನಲ್ಲಿ ಆಗುವುದಕ್ಕೆ ಸಾಧ್ಯವಿಲ್ಲ, ಅದಕ್ಕೆ ಈ ಮೀಟಿಂಗ್ ಫೇಲ್ ಆಯಿತು. ನಾನು ಇದನ್ನು ಒಪ್ಪುವುದಕ್ಕೆ ತಯಾರಿಲ್ಲ ಎಂದು ಮಾತನ್ನು ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಹೇಳುವಂತಹದ್ದು ಏನೆಂದರೆ, ಕೇಂದ್ರ ಸರ್ಕಾರದವರು ಒಂದು ಸಲ ಕಣ್ಣನ್ನು ತೆರೆದರು, ಎರಡನೆ ಸಲ ಕೇಂದ್ರ ಸರ್ಕಾರದವರು ಕಣ್ಣನ್ನು ತೆರೆದಿದ್ದು ಯಾವಾಗ ಅಂದರೆ, ಮಾನ್ಯ ಜಯಲಲಿತಾ ತಮಿಳುನಾಡಿನ ಮುಖ್ಯಮಂತ್ರಿಯವರು ಉಪವಾಸ ಕುಳಿತುಕೊಂಡರೊ ಆಗ ಕಣ್ಣನ್ನು ತೆರೆದರು. ಆಗ ಶುಕ್ಲಾರವರು ಬೆಂಗಳೂರಿಗೂ ಬಂದಿದ್ದರು, ಮತ್ತು ತಮಿಳುನಾಡಿಗೂ ಹೋಗಿದ್ದರು. ಸ್ಪೆಷಲ್‌ಫ್ಲೈಟ್ ತೆಗೆದುಕೊಂಡು ಬಂದಿದ್ದರೋ ಅದರ ಬಗ್ಗೆ ನಾನು ಹೇಳುವ ಹಾಗೆ ಇಲ್ಲ. ಬೆಂಗಳೂರಿನಲ್ಲಿ ಮುಖ್ಯಮಂತ್ರಿಯವರ ಜೊತೆಯಲ್ಲಿ ಮಾತನಾಡಿದರು. ಉಪ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದರು. ಅಲ್ಲಿಂದ ತಮಿಳುನಾಡಿಗೆ ಹೋಗಿ ತಮಿಳುನಾಡಿನ ಮುಖ್ಯಮಂತ್ರಿಗಳಿಗೆ ನೀವು ಏನು ಚಿಂತೆ ಮಾಡಬೇಡಿ, ಇಂಪ್ಲಿಮೆಂಟೇಷನ್ ಮಾನಿಟರಿಂಗ್ ಕಮಿಟಿ ಮಾಡುತ್ತೇನೆ, ಅದಕ್ಕಾಗಿ ನೀವು ಉಪವಾಸವನ್ನು ಬಿಟ್ಟುಬಿಡಿ ಎಂದು ಹೇಳಿದರು. ಉಪವಾಸವನ್ನು ಬಿಡಿಸಿ ಇವತ್ತಿನವರೆಗೂ ಏನು ಆಗಿಲ್ಲ. ಇವತ್ತಿವರೆಗೂ ಕೇಂದ್ರ ಸರ್ಕಾರದವರು ಏನೂ ಇಂಪ್ಲಿಮೆಂಟ್ ಮಾಡಿಲ್ಲ. ಕರ್ನಾಟಕ ಸರ್ಕಾರ ಒಪ್ಪಿಲ್ಲ ಅನ್ನುವಂಥದ್ದು ಇವತ್ತಿನವರೆಗೂ ಹೇಳಿಲ್ಲ. ಒಂದು ವಿಚಾರವನ್ನು ನಾನು ಮಾತನಾಡುವುದಕ್ಕಿಂತ ಮೊದಲೇ ಹೇಳಬೇಕೆಂದು ಇದ್ದೆ. ಏನೆಂದರೆ ನಮಗೂ ನಿಮಗೂ ಆರಿಸಿದವರು ಕರ್ನಾಟಕ ಜನರೇ ಹೊರತಾಗಿ ಈ ದೆಹಲಿಯಲ್ಲಿ ಇರುವಂತಹ ನಾಯಕರು ನಮ್ಮನ್ನು ಆರಿಸಿಲ್ಲ. ಆದಕ್ಕಾಗಿ ನಮ್ಮ ರೂಟ್ಸ್ ಕರ್ನಾಟಕದಲ್ಲಿ ಇದೆಯೇ ಹೊರತಾಗಿ ಬೇರೆ ಕಡೆ ಇಲ್ಲ. ಯಾರಾದರೂ ನಮ್ಮ ರೂಟ್ಸ್ ದೆಹಲಿಯಲ್ಲಿ ಇದೆ ಎಂದು ತಿಳಿದುಕೊಂಡಿದ್ದರೆ ತಪ್ಪು ಎಂದು ನಾನು ಹೇಳಬೇಕಾಗುತ್ತದೆ. ಅದರ ಸಲುವಾಗಿ ಕರ್ನಾಟಕದ ಹಿತರಕ್ಷಣೆ ಮಾಡಬೇಕು, ಕಾವೇರಿ ಹಿತರಕ್ಷಣೆ ಮಾಡಬೇಕು. ಅಂತೂ ಕಾವೇರಿ ನದಿ ಪಾತ್ರದಲ್ಲಿ ಇರುವಂತಹ ಜನ ಕಣ್ಣಲ್ಲಿ ಕಣ್ಣಿಟ್ಟು ನಮ್ಮ

ಪ್ರತಿನಿಧಿಗಳು ಏನು ಮಾಡುತ್ತಿದ್ದಾರೆ, ಏನಿಲ್ಲ, ಬರೀ ರೆಸಲ್ಯೂಷನ್ ಮಾಡಿ ಮನೆಗೆ ಬರುತ್ತಾರೋ, ಕರ್ನಾಟಕ ಜನರ ಹಿತರಕ್ಷಣೆಯನ್ನು ಮಾಡುವುದಕ್ಕೆ ಏನು ಪ್ರಯತ್ನ ಮಾಡುತ್ತಿದ್ದಾರೆ ಅನ್ನುವಂಥಾದ್ದನ್ನು ನೋಡುತ್ತಿದ್ದಾರೆ. ಈ ಮಾತನ್ನು ನಾನು ಮಧ್ಯದಲ್ಲಿ ಹೇಳಬೇಕಾದಂತಹ ಅವಶ್ಯಕತೆ ಏತಕ್ಕೆ ಬಂತು ಅಂದರೆ, ಇವತ್ತು ಕರ್ನಾಟಕ ರಾಜ್ಯದ ಜನರ ಹಿತರಕ್ಷಣೆ ಮಾಡುವಂತಹದ್ದು ಕಾವೇರಿ ನದಿ ಪಾತ್ರದಲ್ಲಿ ಜನರ ಹಿತರಕ್ಷಣೆ ಮಾಡುವಂತಹ ಜವಾಬ್ದಾರಿ ನಿಮ್ಮೆಲ್ಲರ ಮೇಲೆ ಇದೆ. ನಮ್ಮೆಲ್ಲರ ಮೇಲೆ ಇದೆ. ಅದನ್ನು ಅರಿತುಕೊಂಡು ನಮ್ಮ ಜವಾಬ್ದಾರಿಯನ್ನುನಾವು ಸರಿಯಾಗಿ ನಿರ್ವಹಣೆ ಮಾಡಿದರೆ ನಾಲ್ಕು ದಿವಸ ಅಸೆಂಬ್ಲಿ ಸದಸ್ಯರಾಗಿ ಬದುಕಬಹುದು. ಇಲ್ಲದಿದ್ದರೆ ಮುಂದಿನ 12 ತಿಂಗಳಲ್ಲಿ ಅಥವಾ 15 ತಿಂಗಳಲ್ಲಿ ಎಲೆಕ್ಷನ್ ಬರುತ್ತದೆ. ಎಲೆಕ್ಷನ್ ಬಂದಾಗ ನಮ್ಮನ್ನು ಮನೆಗೆ ಕಳುಹಿಸಬಹುದು ಎಂದು ಅನಿಸುತ್ತದೆ. ಕಾವೇರಿ ಜನ ಹೇಳಬಹುದು. ಏನಪ್ಪ ನಿಮ್ಮನ್ನು ಆರಿಸಿ ಕಳುಹಿಸಿದ್ದೇವೆ, ಜೊತೆಗೆ ಏನೂ ಕೆಲಸ ಮಾಡಿಲ್ಲ ಏನೂ ಇಲ್ಲ. ನಿಮ್ಮ ಸ್ವಾರ್ಥಸಾಧನೆಗೆ ಪ್ರಯತ್ನ ಮಾಡಿದಿರಿ ಹೊರತಾಗಿ ನೀವೇನು ನಮ್ಮ ಸಲುವಾಗಿ ಕಾವೇರಿ ಹಿತರಕ್ಷಣೆ ಸಲುವಾಗಿ, ಕರ್ನಾಟಕದ ಸಲುವಾಗಿ ನೀವೇನು ಪ್ರಯತ್ನವನ್ನು ಮಾಡಲಿಲ್ಲ, ಅದಕ್ಕೆ ನೀವು ದಯಮಾಡಿಮನೆಗೆ ಹೋಗಿ, ನಮಗೆ ಬೇಕಾದವರನ್ನು ನಾವು ಆರಿಸಿಕೊಳ್ಳುತ್ತೇವೆ ಎಂದು ಹೇಳುವಂಥ ಅವಕಾಶ ಕರ್ನಾಟಕದ ಜನತೆಗೆ ಇನ್ನೊಂದು 15 ತಿಂಗಳಲ್ಲಿ ಸಿಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೆ ನಾನು ಹೇಳುವಂಥದ್ದು ಏನೆಂದರೆ , ಕರ್ನಾಟಕದಲ್ಲಿ ಕಾವೇರಿಯಾಗಲಿ, ಕೃಷ್ಣ ಆಗಲಿ, ನದಿ ಪಾತ್ರದಲ್ಲಿರುವಂಥ ಜನರ ಹಿತರಕ್ಷಣೆ ಮಾಡುವಂಥ ಜವಾಬ್ದಾರಿ ಈ ಸದನಕ್ಕೆ ಇದೆ. ಈ ಜವಾಬ್ದಾರಿಯನ್ನು ಅರಿತು ನಾವೆಲ್ಲರೂ ನಮ್ಮ ನಮ್ಮ ಕರ್ತವ್ಯಗಳನ್ನು ಮಾಡಿದರೆ ನಾಲ್ಕು ದಿವಸ ಇರಬಹುದು. ಒಂದು ವೇಳೆ ನಾವು ಕರ್ತವ್ಯ ಮಾಡಲಾರದೆ ಹೋದರೆ ಮುಂದಿನ ಚುನಾವಣೆಯಲ್ಲಿ ಮನೆಗೆ ಕಳುಹಿಸುತ್ತಾರೆ ಎಂದು ನನಗನಿಸುತ್ತದೆ. ಅಲ್ಲಿಂದ ಎರಡು ಸಲ ಕೇಂದ್ರ ಸರ್ಕಾರದವರು ಕಣ್ಣು ತೆರೆದರು. ಒಂದು ಸಲ ಇಲ್ಲಿ ಗಲಾಟೆ ಆಯಿತು ಆಗ ಕಣ್ಣು ತೆರೆದರು. ಆಗ ಒಂದು ಸಲ ಮೀಟಿಂಗ್ ಮಾಡಿದರು. ಎರಡನೆಯ ಸಲ ತಮಿಳುನಾಡಿನ ಮುಖ್ಯಮಂತ್ರಿಗಳು ಉಪವಾಸ ಕುಳಿತರು ಎಂದು ಆಗ ತಮ್ಮ ಇರಿಗೇಶನ್ ಮಿನಿಸ್ಟರ್‌ನ್ನು ಕಳುಹಿಸಿಕೊಟ್ಟರು. ಇದು ಎರಡನೇ ಸಲ ಹೊರತಾಗಿ ಮತ್ತೆ ಮೂರನೇ ಸಲ ಕಣ್ಣು ತೆರೆದಿದ್ದು ನನಗಂತೂ ಗೊತ್ತಿಲ್ಲ ಎಂದು ನನಗನಿಸುತ್ತದೆ. ಇದು ಏನು ತೋರಿಸುತ್ತದೆ ಎಂದರೆ, ಇವತ್ತು ಕೇಂದ್ರಸರ್ಕಾರದಲ್ಲಿ ಕೂಡ ಅವರದು ಒನ್ ಪಾಯಿಂಟ್ ಪ್ರೋಗ್ರಾಮ್ ಇದ್ದಂತೆ ಕಾಣಿಸುತ್ತದೆ. How to survive in power; how to grab power; how to remain in power. ಎನ್ನುವುದೇ ಒಂದೇ ಒಂದು ಪ್ರಾಬ್ಲಮ್ ಇದ್ದಹಾಗೆ ಕಾಣಿಸುತ್ತದೆ. ಅವರು ಪ್ರಯತ್ನವನ್ನು ಮಾಡುತ್ತಿದ್ದಾರೆ. ನಾವು ಪವರ್‌ನಲ್ಲಿ ಇರಬೇಕು ಎಂದು. ನನಗನಿಸುತ್ತದೆ, ಈ ಧೋರಣೆ ಯಾವುದೇ ಒಂದು ರಾಜ್ಯದ ಹಿತರಕ್ಷಣೆ ಮಾಡುವುದಕ್ಕೆ ಯೋಗ್ಯವಾದುದು ಅಲ್ಲ ಈ ಧೋರಣೆ ಎಂದು ನಾನು ಈ ಸಂಬಂಧದಲ್ಲಿ ಸ್ಪಷ್ಟವಾಗಿ ನಾನು ಹೇಳುತ್ತಿದ್ದೇನೆ. ಇವತ್ತು ತಮಿಳು ನಾಡಿನ ಮುಖ್ಯಮಂತ್ರಿಗಳು ಉಪವಾಸ ಕುಳಿತರು. ಕೇಂದ್ರಸರ್ಕಾರದ ಸಂಬಂಧಪಟ್ಟು ಮಂತ್ರಿಗಳು ತಮಿಳುನಾಡಿಗೆ ಹೋದರು, ಕರ್ನಾಟಕಕ್ಕೂ ಹೋದರು. ಒಂದು ವೇಳೆ ಮೊಯಿಲಿಯವರು ಇವತ್ತು ನಮ್ಮ ಮುಖ್ಯಮಂತ್ರಿ ಇದ್ದಾರೆ. ಅವರು ಹೇಳಬಹುದು ಕೇಂದ್ರಸರ್ಕಾರಕ್ಕೆ, ನೀವು ಟ್ರಿಬ್ಯೂನಲ್ ಮಾಡಿದ್ದೀರಿ, ಟ್ರಿಬ್ಯೂನಲ್‌ನ್ನು ಕ್ಯಾನ್ಸಲ್ ಮಾಡಿ, ಇಲ್ಲದಿದ್ದರೆ ವಿಧಾನಸೌಧದಿಂದ ಕೆಳಗೆ ಬಿದ್ದು ಸಾಯುತ್ತೇನೆ. ಎಂದರೆ ಟ್ರಿಬ್ಯೂನಲ್‌ನ್ನು ಕ್ಯಾನ್ಸಲ್ ಮಾಡಬಹುದು. ನಾನು ಕೇಂದ್ರ ಸರ್ಕಾರಕ್ಕೆ ಕೇಳಬೇಕು ಎಂದು ಇದ್ದೇನೆ, ಅಂದರೆ ಈ ರೀತಿ

ಒತ್ತಾಯ ಮಾಡಿದರೆ ಮಣಿಯುತ್ತೇವೆ, ಇಲ್ಲದಿದ್ದರೆ ಒತ್ತಾಯ ಮಾಡಲಾರದೆ ಹೋದರೆ we will take you for granted ಎನ್ನುವಂಥ ಏನು ಪಾಲಿಸಿ ಇದೆಯೆಲ್ಲ, ಅದು ಸರಿಯಾದ ಪಾಲಿಸಿಯಲ್ಲ ಎಂದು ನನಗನಿಸುತ್ತದೆ. ಅಲ್ಲಿಂದ ಈ ಕಾವೇರಿ ಬಗ್ಗೆ ಮಂಡ್ಯದಲ್ಲಿ ಮೈಸೂರಿನಲ್ಲಿ ಅನೇಕ ಸಭೆಗಳಾದವು. ನಾವು ಆ ಸಭೆಗಳಲ್ಲಿ ಕೆಲವು ಈ ಸದನದ ಮಾನ್ಯ ಸದಸ್ಯರುಗಳು ಕೂಡ ಭಾಗವಹಿಸಿದ್ದರು. ನಾನು ಇಷ್ಟೇ ಹೇಳುವಂಥದ್ದು ನಾನು ಹಿಂದಕ್ಕೆ ಈ ಚರ್ಚೆಯಲ್ಲಿ ಭಾಗವಹಿಸುವ ಮುನ್ನ ಸ್ಪಷ್ಟವಾಗಿ ಹೇಳಿದ್ದೇನೆ. ನಾವು ಒಂದು ವೇಳೆ ರಾಜೀನಾಮೆ ಕೊಟ್ಟರೆ ಫೋರಂಗೆ ರಾಜೀನಾಮೆ ಕೊಡಬಾರದು ಎಂದು ಸ್ಪಷ್ಟವಾಗಿ ಹೇಳಿದ್ದೆ. ಮತ್ತು ಇವತ್ತು ಆದೇ ವಿಚಾರ ಇದೆ. ಆದರೆ ಆಗ ಏನು ಆ ಸದನದಲ್ಲಿ ಏನೇನು ಠರಾವುಗಳನ್ನು ಪಾಸು ಮಾಡಿದ್ದಾರೆ, ನಾನು ಈ ಸದನದಲ್ಲಿ ಇರುವಂಥ ಸದಸ್ಯರು, ಆ ಮಂಡ್ಯ ಮತ್ತು ಮೈಸೂರು ಸಭೆಗಳಿಗೆ ಏನು ಹೋಗಿದ್ದರು, ಅವರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ದಯಮಾಡಿ ಆ ಸಭೆಯಲ್ಲಿ ನೀವು ಪಾಸು ಮಾಡಿದ ರೆಸಲ್ಯೂಷನ್ ಮತ್ತೊಮ್ಮೆ ಓದಿ ನೋಡಿ. ಯಾರಾದರೂ ರಾಜೀನಾಮೆ ಕೊಟ್ಟಿದ್ದಾರೊ ಎಂದು. ಈ ಸದನದಿಂದ ಯಾರಾದರೂ ರಾಜೀನಾಮೆ ಕೊಟ್ಟಿದ್ದಾರೆಯೇ? ಯಾರೂ ರಾಜೀನಾಮೆ ಕೊಟ್ಟಿಲ್ಲ. ಯಾರು ರಾಜೀನಾಮೆ ಕೊಡುವಂಥ ಪರಿಸ್ಥಿತಿಯಲ್ಲಿ ಇದ್ದಹಾಗೆ ಕಾಣಿಸುವುದಿಲ್ಲ. ನಾವು ಏತಕ್ಕೆ ಆ ಜನರಿಗೆ ಮೋಸ ಮಾಡಬೇಕು ಎಂದು ನಾನು ಕೇಳುತ್ತಿದ್ದೇನೆ. ಜನರಿಗೆ ಸುಳ್ಳು ಏಕೆ ಹೇಳಬೇಕು? ಇದು ಆಗುತ್ತದೆ, ಇದು ಆಗುವ ಹಾಗೆ ಇಲ್ಲ, ಇದನ್ನು ಮಾಡುತ್ತೇವೆ, ಇದನ್ನು ಮಾಡುವ ಹಾಗೆ ಇಲ್ಲ ಎಂದು ಸ್ಪಷ್ಟವಾಗಿ ಹೇಳಬೇಕು. ಎಂಪಿಗಳು ನಾವು ರಾಜೀನಾಮೆ ಕೊಡುತ್ತೇವೆಂದು ಹೇಳಿದರು, ಇವತ್ತು ಪಾರ್ಲಿಮೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದಾರೆಯೇ ಹೊರತು ಯಾರೂ ರಾಜೀನಾಮೆ ಕೊಟ್ಟಿಲ್ಲ. ಕಾವೇರಿ ಬಗ್ಗೆ ವಿಚಾರಗಳು ಹಾಗೆ ನಡೆದುಕೊಂಡು ಹೋಗುತ್ತಿದೆ. ಕಾವೇರಿ ಬಗ್ಗೆಗಿಂತ ಹೆಚ್ಚಾಗಿ ಸ್ಥಾನದ ಬಗ್ಗೆ, ಅಧಿಕಾರದ ಬಗ್ಗೆ ಚಿಂತೆ ಇದೆಯೇ ಹೊರತು ಕಾವೇರಿ ಬಗ್ಗೆ ಚಿಂತೆ ಇಲ್ಲ ಎಂದು ನನಗನ್ನಿಸುತ್ತದೆ. ನಾನು ಒಂದು ವಿಚಾರವನ್ನು ಶ್ರೀಮಾನ್ ಕೃಷ್ಣ ಅವರು ಇಲ್ಲಿ ಕುಳಿತಿದ್ದಾರೆ ಅವರಿಗೆ ಹೇಳುತ್ತಿದ್ದೇನೆ. ಈಗ ಕಾವೇರಿಯಲ್ಲಿ ಎರಡು ಪಾಯಿಂಟ್ ಇದೆ. ಎರಡು ಪಾಯಿಂಟ್‌ನಲ್ಲಿ ನಾವು ಹೈಡ್ರೋ ಎಲೆಕ್ಟ್ರಿಕ್ ಪವರ್ ಕೇಳುತ್ತಿದ್ದೇವೆ. ಒಂದು ಕರ್ನಾಟಕದ ಸುತ್ತಮುತ್ತ ಮಾತು. ಅಲ್ಲಿಂದ ಇನ್ನೊಂದು ತಮಿಳುನಾಡು ಹತ್ತಿರದಲ್ಲಿ. ತಮಿಳುನಾಡು ಮುಖ್ಯಮಂತ್ರಿಗೆ ನಾನು ಅಧಿಕಾರದಲ್ಲಿ ಇದ್ದಾಗ ಹೇಳಿದೆ. ನಿಮಗೆ ಬೇಕಾದಂತಹ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ನೀವು ತೆಗೆದುಕೊಳ್ಳಿ, ನಮ್ಮ ಅಡ್ಡಿ ಇಲ್ಲ, ಅದೇ ರೀತಿಯಿಂದ ನಮಗೆ ಬೇಕಾದಂತಹ ಎಲೆಕ್ಟ್ರಿಸಿಟಿ ಪ್ರಾಜೆಕ್ಟ್‌ಗೆ ನೀವು ಅಡ್ಡಿ ಬರಬಾರದು ಎಂದು ಹೇಳಿದೆ. ಏಕೆಂದರೆ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ನಿಂದ ನೀರು ವೇಸ್ಟ್ ಆಗುವ ಹಾಗೆ ಇಲ್ಲ. ನೀರು ವ್ಯಾಲಿಗೆ ಬರುತ್ತದೆ. ಅದಕ್ಕಾಗಿ ನಿಮ್ಮ ನೀರು ವೇಸ್ಟ್ ಆಗುವ ಹಾಗೆ ಇಲ್ಲ. ನಿಮ್ಮ ನೀರನ್ನು ನಾವು ಉಪಯೋಗ ಮಾಡುವ ಹಾಗೆ ಇಲ್ಲ ಎಂದ ಮೇಲೆ ನೀವು ಏಕೆ ನಮಗೆ ಅಡ್ಡಿ ಮಾಡುತ್ತೀರಿ ಎಂದು ನಾನು ಅವರನ್ನು ಕೇಳಿದೆ. ಆ ವೇಳೆಗೆ ಟ್ರಿಬ್ಯೂನಲ್ ಮುಂದೆ ವಿಚಾರ ಹೋಗಿತ್ತೋ ಇಲ್ಲವೋ ಗೊತ್ತಿಲ್ಲ. ಒಂದು ವಿವಾದ ಇತ್ತು, ಆ ವೇಳೆಗೆ ಟ್ರಿಬ್ಯೂನಲ್ ಬಂತು. ಈಗ ನಾವು ಏನೂ ಮಾಡುವುದಕ್ಕೆ ತಯಾರು ಇಲ್ಲ. ಈ ವಿಚಾರವನ್ನು ನಾನು ಏಕೆ ಹೇಳಿದೆ ಅಂದರೆ, ಕೇಸ್ ಟ್ರಿಬ್ಯೂನಲ್ ಮುಂದೆ ಹೋಗಿದೆ. ಕರ್ನಾಟಕದ ಮುಖ್ಯಮಂತ್ರಿಗಳು ಆಗಲಿ ಅಥವಾ ಇರಿಗೇಷನ್ ಮಿನಿಸ್ಟರ್ ಹಾಗೂ ಉಪ ಮುಖ್ಯಮಂತ್ರಿಗಳು ಆಗಲಿ, ಅವರುಗಳು ಕರ್ನಾಟಕದ ನಮ್ಮ ವಾದ ಏನು ಇದೆ ಅದನ್ನು ಪ್ರತಿಪಾದಿಸುವಂತಹ ನಮ್ಮ ವಕೀಲರಿಗೆ ಈ ಕೇಸ್ ತೆಗೆದುಕೊಂಡು ಟ್ರಿಬ್ಯೂನಲ್ ಮುಂದೆ ಹೇಳಿ. ಟ್ರಿಬ್ಯೂನಲ್ ಒಂದು ಡೈರೆಕ್ಷನ್ ಕೊಡಲಿ. ಆ

ವೇಳೆಗೆ ಟ್ರಿಬ್ಯೂನಲ್ ಡೈರೆಕ್ಷನ್ ಕೊಟ್ಟು ಈ ಪ್ರಾಜೆಕ್ಟನ್ನು ಕ್ಲಿಯರ್ ಮಾಡಿ ಎಂದರೆ ಅವರು ಮಾಡುತ್ತಾರೆ ಇಲ್ಲದೇಹೋದರೆ ಕ್ಲಿಯರ್ ಮಾಡುವ ಹಾಗೆ ಇಲ್ಲ ಏಕೆ ಕ್ಲಿಯರ್ ಮಾಡುವ ಹಾಗೆ ಇಲ್ಲ ಎಂದರೆ ಕೇಂದ್ರ ಸರ್ಕಾರದವರು ಒಂದು ಪಾಲಿಸಿ ಮಾಡಿಕೊಂಡಿದ್ದಾರೆ. ಯಾರು ಇಂಟರ್‌ಸ್ಟೇಟ್ ಲೈರ್‌ನಲ್ಲಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಆಗಲಿ, ಇರಿಗೇಷನ್ ಪ್ರಾಜೆಕ್ಟ್ ಆಗಲೀ ಕನ್‌ಸರ್ನ್ಡ್ ಎಲ್ಲಾ ಸ್ಟೇಟ್ ಒಪ್ಪಲಾರದೆ ಅವರು ಪ್ರಾಜೆಕ್ಟ್ ಕೆಲಸಮಾಡುವ ಹಾಗೆ ಇಲ್ಲ. ಇದು ಒಂದು ಅವರ ಪಾಲಿಸಿ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಶ್ರೀಮಾನ್ ಕೃಷ್ಣ ಅವರಲ್ಲಿ ವಿನಂತಿಸುವುದೇನೆಂದರೆ, ನಮ್ಮ ಕೇಸಿಗೆ ಯಾವ ವಕೀಲರು ಇದ್ದಾರೆ ಅವರಿಗೆ ಹೇಳಿ ಟ್ರಿಬ್ಯುನಲ್ ಮುಂದೆ ಅಪ್ಲಿಕೇಶನ್ ಹಾಕಿಕೊಂಡು, ಅವರು ಏನು ಡೈರೆಕ್ಷನ್ ಕೊಡುತ್ತಾರೆ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು. ಈ ಸಂದರ್ಭವನ್ನು ನಾನು ಉಪಯೋಗಿಸಿಕೊಂಡು ಈ ಸಲಹೆಯನ್ನು ಶ್ರೀಮಾನ್ ಕೃಷ್ಣ ಅವರಿಗೆ ಮಾಡುತ್ತಿದ್ದೇನೆ. ಏಕೆಂದರೆ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ನಮ್ಮಲ್ಲಿ ದೊಡ್ಡ ಪ್ರಾಜೆಕ್ಟ್, ಅಲ್ಲಿಂದ ಮತ್ತೆ ಟೀಪೆಸ್ಟ್ ಪ್ರಾಜೆಕ್ಟ್ ಕೂಡ. ಸುಮಾರು 700, 800 ಮೆಗಾವ್ಯಾಟ್ ಜನರೇಟ್ ಮಾಡುವ ಪ್ರಾಜೆಕ್ಟ್. ನೀರು ವೇಸ್ಟ್ ಆಗುವುದಿಲ್ಲ. ಟರ್ಬೈನ್‌ನಿಂದ ತಿರುಗಿ ವ್ಯಾಲಿಗೇ ನೀರು ಹೋಗುತ್ತದೆ. ಅದಕ್ಕೆ ಈ ಒಂದು ಪ್ರಾಜೆಕ್ಟ್‌ನ್ನು ಕ್ಲಿಯರ್ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ಟ್ರಿಬ್ಯುನಲ್ ಮಾಡಬೇಕು.ಇದು ನಮ್ಮ ಕರ್ತವ್ಯ ಎನಿಸುತ್ತದೆ. ಇದನ್ನು ಮಾಡಬಹುದು ಅಥವಾ ಈಗಾಗಲೇ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಮಾಡಿರಲಿಕ್ಕಿಲ್ಲ ಎಂದು ನಾನು ಈ ವಿಚಾರವನ್ನು ಹೇಳಿದ್ದೇನೆ. ಬಹುಶಃ ಶ್ರೀಮಾನ್ ಕೃಷ್ಣ ಅವರು ಶ್ರೀಮಾನ್ ಮೊಯಿಲಿ ಅವರು ತಮ್ಮ ಭಾಷಣದಲ್ಲಿ, ಇಲ್ಲವೇ ಉತ್ತರದಲ್ಲಿ ಈ ವಿಚಾರದ ಬಗ್ಗೆ ಸರ್ಕಾರದ ನಿಲುವು ಏನು ಎಂದು ಹೇಳುತ್ತಾರೆಂದು ನಾನು ಆಸೆ ಮಾಡುತ್ತೇನೆ.

ಮಾನ್ಯ ಶುಕ್ಲಾ ಅವರು ಕರ್ನಾಟಕಕ್ಕೆ ಬಂದರು, ಒಂದು ಹೇಳಿಕೆ ಮಾಡಿದರು. ತಮಿಳುನಾಡಿಗೆ ಬಂದು ಅಲ್ಲೂ ಒಂದು ಹೇಳಿಕೆ ಮಾಡಿದರು. ಇಲ್ಲಿಯವರೆಗೆ ಒಂದು ಮೀಟಿಂಗ್ ಆಗಿಲ್ಲ. ಮೊನ್ನೆಯೋ ನಿನ್ನೆಯೋ ನಾನು ಪತ್ರಿಕೆಯಲ್ಲಿ ನೋಡಿದೆ. ಈ ವಿಚಾರದಲ್ಲಿ ಒಂದು ಮೀಟಿಂಗ್ ಇಟ್ಟಿದ್ದರೆಂದು; ಮತ್ತೆ ಅದನ್ನು ಪುನಃ ರದ್ದು ಮಾಡಿದ್ದಾರೆಂದು ಹೇಳಿದ ಮೇಲೆ ನನಗನ್ನಿಸುತ್ತದೆ ಅವರು ಏನು ಹೇಳಿದ್ದಾರೆಂದರೆ, 'ಕರ್ನಾಟಕದವರೂ ಒಪ್ಪಿದ್ದಾರೆ, ತಮಿಳುನಾಡಿನವರೂ ಒಪ್ಪಿದ್ದಾರೆ, ಎಲ್ಲಾ ರಾಜ್ಯಗಳವರು ಒಪ್ಪಿದ್ದಾರೆ, ಅವರುಗಳು ಒಪ್ಪಿದ್ದಕ್ಕೆ ನಾನು ಒಂದು ಇಂಪ್ಲಿಮೆಂಟೇಷನ್ ಕಮಿಟಿ ಮಾಡುತ್ತೇನೆಂದು.' ಅವರು ಈ ರೀತಿ ಹೇಳಿದ ನಂತರ ಕರ್ನಾಟಕದ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂದರೆ 'ನಾನು ಇದನ್ನು ಒಪ್ಪಿಲ್ಲ, ಅವರು ಸುಳ್ಳು ಹೇಳುತ್ತಿದ್ದಾರೆಂದು.' ಕರ್ನಾಟಕದ ಮುಖ್ಯಮಂತ್ರಿಗಳು ಏನು ಹೇಳಿದ್ದಾರೋ ಅದನ್ನು ನಂಬುವುದಕ್ಕೆ ನಾನು ತಯಾರಿದ್ದೇನೆಯೇ ಹೊರತು ಶುಕ್ಲಾರವರು ಏನು ಹೇಳುತ್ತಾರೋ ಅದನ್ನು ನಂಬುವುದಕ್ಕೆ ನಾನು ತಯಾರಿಲ್ಲ. ಏಕೆಂದರೆ, ಕಾರಣವಿಷ್ಟೆ: ಮೊಯಿಲಿಯವರು ಕರ್ನಾಟಕದವರು, ಮತ್ತು ಅವರು ಕರ್ನಾಟಕದ ಬಗ್ಗೆ ಸುಳ್ಳು ಹೇಳುವುದಿಲ್ಲವೆಂದು ನನಗನ್ನಿಸುತ್ತದೆ. ಶುಕ್ಲಾರವರು ತಮ್ಮ ಬೇಸ್‌ಗಿಂಥ ಹೆಚ್ಚು ಮುಂದೆ ಹೋಗಿ ಅಲ್ಲಿ ಅಯಕ್ಟ್ ಮಾಡಿದ್ದಾರೆಂದು ನನಗನ್ನಿಸುತ್ತದೆ. ಅವರು ತಮಿಳು ನಾಡಿಗೆ ಹೋಗಿ ಅಲ್ಲಿನ ಮುಖ್ಯಮಂತ್ರಿಗಳಿಗೆ 'ಕಮಿಟಿ ಮಾಡುತ್ತೇನೆ, ನೀವು ಉಪವಾಸ ಬಿಟ್ಟುಬಿಡಿ' ಎಂದು ಹೇಳುತ್ತಾರೆ. ಅವರಿಗೆ ಅಧಿಕಾರವಿಲ್ಲದಿದ್ದರೆ ಏತಕ್ಕಾದರೂ ಹೇಳಬೇಕು ಪ್ರಧಾನಮಂತ್ರಿಗಳಾದರೂ 'ನಾನು ಕೊಟ್ಟ ಬೇಸ್‌ಗಿಂಥ ಹೆಚ್ಚಿ ಮುಂದಕ್ಕೆ ಹೋಗಿ ಈ ರೀತಿ ಅವರಿಗೆ ಭರವಸೆ ಕೊಟ್ಟಿದ್ದು ತಪ್ಪು ಅದಕ್ಕಾಗಿ ನೀನು

ರಾಜೀನಾಮೆ ಕೊಡು' ಎಂದು ಕೇಳಬೇಕು. ಇವೊತ್ತು ನಮ್ಮ ದುರ್ದೈವಕ್ಕೆ ಕೇಂದ್ರ ಮಂತ್ರಿ ಮಂಡಲ ರಚಿತವಾಗಿದೆ. ಈ ಪ್ರಶ್ನೆ ಜಗತ್ತಿನಲ್ಲಿಯೇ ಬಗೆಹರಿಯುವುದಿಲ್ಲವೇನೋ ಎನ್ನುವ ಮಟ್ಟಕ್ಕೆ ತಂದಿದ್ದೇವೆ. ಆದಕ್ಕಾಗಿ ನಾನು ಇವೊತ್ತು ಹೇಳುವುದೇನೆಂದರೆ ಶುಕ್ಲಾರವರು ಒಂದು ವೇಳೆ ತಪ್ಪು ಹೇಳಿದ್ದರೆ ಪ್ರಧಾನಮಂತ್ರಿಯವರು 'ನೀವು ತಪ್ಪು ಹೇಳಿಕೆ, ತಪ್ಪು ಆಶ್ವಾಸನೆ ಕೊಟ್ಟಿದ್ದೀರಿ, ಆದಕ್ಕಾಗಿ ನನ್ನಮಂತ್ರಿಮಂಡಲದಲ್ಲಿ ನೀವು ಇರುವುದಕ್ಕೆ ಅಯೋಗ್ಯರು' ಎಂದು ಸ್ಪಷ್ಟವಾಗಿ ಇವೊತ್ತು ಹೇಳಬೇಕು. ಆದರೂ ಏಕೆ ಹೇಳುತ್ತಿಲ್ಲ? ಅವರು ಸುಮ್ಮನೆ ಕುಳಿತಿದ್ದಾರೆ, ಶುಕ್ಲಾರವರು ಸಹ ಹಾಗೆಯೇ ಸುಮ್ಮನೆ ಕುಳಿತಿದ್ದಾರೆ. ಒಂದೆರಡು ದಿವಸ ಮೀಟಿಂಗ್ ನಡೆದಿದೆಯೆಂದು, ಮೀಟಿಂಗ್ ನಡೆದಿಲ್ಲವೆಂದು ಹೇಳುತ್ತಾರೆ. ಇದೇನು ತಮಾಷೆ ನಡೆದಿದೆಯೋ, ಏನು ಎನ್ನುವುದೇ ಅರ್ಥವಾಗುವುದಿಲ್ಲ. ಇಂತಹ ಪರಿಸ್ಥಿತಿ ಇವೊತ್ತಿನ ದಿವಸ ನಮ್ಮ ದೇಶದಲ್ಲಿ ಉದ್ಭವಿಸಿದೆ. ಇದು ಪ್ರತಿಯೊಬ್ಬರ ಮನಸ್ಸಿಗೂ ನೋವನ್ನುಂಟು ಮಾಡುವ ವಿಚಾರವೆಂದು ನನಗನ್ನಿಸುತ್ತಿದೆ. ಕೊನೆಯದಾಗಿ, ನಾನು ಇಷ್ಟೇ ಹೇಳುವಂತಾದ್ದು : ಈ ಜಲ ವಿವಾದದ ಪ್ರಶ್ನೆ ಕಾನೂನಿಗೆ ಸಂಬಂಧಪಟ್ಟಿರುವುದರಿಂದ ಇದನ್ನು ಟ್ರಿಬ್ಯೂನಲ್ ಬಗೆಹರಿಸುವುದಕ್ಕಾಗುವುದಿಲ್ಲ. ಈ ಪ್ರಶ್ನೆ ಬಗೆಹರಿಸಬೇಕಾದರೆ ಇರುವುದೊಂದೇ ಹಾದಿ. ಸ್ವತಃ ಪ್ರಧಾನಮಂತ್ರಿಯವರೇ, ಇದರ ಹೊಣೆ ಹೊತ್ತುಕೊಂಡು ನಾನೇ ಈ ವಿವಾದ ಬಗೆಹರಿಸುತ್ತೇನೆ, ನೀವು ಟ್ರಿಬ್ಯೂನಲ್ ಮುಂದೆ ಹೋಗಬಾರದು ಎಂದು ಹೇಳಿದರೆ ಮಾತ್ರ ಈ ವಿವಾದ ಬಗೆಹರಿಯುತ್ತದೆ.

(ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

ಅದಕ್ಕೋಸ್ಕರ, ನಾನು ಇಷ್ಟೇ ವಿನಂತಿಸಿಕೊಳ್ಳುವುದು. ಶ್ರೀಮಾನ್ ಮೊಯಿಲಿಯವರಾಗಲಿ, ಶ್ರೀಮಾನ್‌ಕೃಷ್ಣಾರವರಾಗಲಿ ದೆಹಲಿಗೆ ಹೋಗಿ ಪ್ರಧಾನಮಂತ್ರಿಯವರನ್ನು ಕಂಡು 'ಇನ್ನೊಂದು ಮೀಟಿಂಗ್ ಕರೆದು ಪ್ರಯತ್ನ ಮಾಡಿ' ಎಂದು ಕೇಳಿಕೊಳ್ಳುವುದು. ಇವೊತ್ತಿನವರೆಗೂ ಪ್ರಧಾನಮಂತ್ರಿಯವರು ಒಂದು ಮೀಟಿಂಗ್ ಮಾಡಿದ ನಂತರ ಮತ್ತೆ ಎಂದೂ ಮೀಟಿಂಗ್ ಮಾಡಿಲ್ಲ. ಅವರು ಇನ್ನೂ ಸ್ಟೇಟ್‌ಮೆಂಟ್ ಮಾಡಿಲ್ಲ. ಮೀಟಿಂಗ್ ಮಾಡಿದ ನಂತರವೂ ಇನ್ನೊಂದು ಮೀಟಿಂಗ್ ಮಾಡುತ್ತಾರೋ, ಇಲ್ಲವೋ ಅಥವಾ ಮೀಟಿಂಗ್ ವಿಫಲವಾಗಿದೆಯೋ, ಮೀಟಿಂಗ್ ಮಾಡುವುದಕ್ಕೆ ನಾನು ತಯಾರಿಲ್ಲ ಎನ್ನುತ್ತಾರೋ ಏನೋ ನನಗೊತ್ತಿಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ , ನೂರು ವರ್ಷಗಳ ಜಗಳ ಒಂದೇ ವರ್ಷದಲ್ಲಿ ಬಗೆಹರಿಸುವುದಕ್ಕಾಗುವುದಿಲ್ಲ, ಒಂದೇ ಮೀಟಿಂಗ್ ಮಾಡಿ ಬಗೆಹರಿಸುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಶ್ರೀಮಾನ್ ಮೊಯಿಲಿಯವರಾಗಲಿ, ಶ್ರೀಮಾನ್ ಕೃಷ್ಣಾರವರಾಗಲಿ ದೆಹಲಿಗೆ ಹೋಗಿ ಅಲ್ಲಿ ಪ್ರಧಾನಮಂತ್ರಿಗಳನ್ನು ಕಂಡು ಎಲ್ಲಾ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆಸಿ ಜಗಳ ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿ. ಇಲ್ಲದೆ ಹೋದರೆ, ಈ ಜಗಳ ಟ್ರಿಬ್ಯೂನಲ್ ಮುಂದೆ ಹೋದರೆ ಬಗೆಹರಿಯುವುದಿಲ್ಲ. ಮೇಲಿನವರು ನಾವು ಅಪ್ಪರ್ ರೀಚೆಸ್ಟ್‌ನಲ್ಲಿದ್ದೇವೆಯೋ, ತಮಿಳುನಾಡಿನವರು ಅಪ್ಪರ್ ರೀಚೆಸ್ಟ್‌ನಲ್ಲಿದ್ದಾರೋ ಎನ್ನುವುದನ್ನು ನಾವು ಸ್ಪಷ್ಟವಾಗಿ ಪ್ರಧಾನಮಂತ್ರಿಯವರಿಗೆ ತಿಳಿಯುವಂತೆ ಹೇಳಬೇಕೆಂದು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ. ಈ ರೀತಿ ಮಾಡಬೇಕಾದರೆ ಒಂದು ಕೆಲಸ ಮಾಡಬೇಕಾಗುತ್ತದೆ. ನಾವು (ಕರ್ನಾಟಕ), ತಮಿಳುನಾಡು, ಕೇರಳ ಮತ್ತು ಪಾಂಡಿಚೇರಿ, ಈ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳು ಒಟ್ಟಾಗಿ ಕಲೆತು 'ಈ ವಿವಾದವನ್ನು ಟ್ರಿಬ್ಯೂನಲ್ ಮುಂದೆ ತೆಗೆದುಕೊಂಡು ಹೋಗದೆ, ಪ್ರಧಾನಮಂತ್ರಿಗಳ ಹತ್ತಿರ ಈ ವಿಚಾರವಾಗಿ ಚರ್ಚಿಸುತ್ತೇವೆ' ಎಂದರೆ ವಿವಾದವನ್ನು

ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು, ಇಲ್ಲದಿದ್ದರೆ ಸಾಧ್ಯವಿಲ್ಲವೆಂದು ನನಗನ್ನಿಸುತ್ತದೆ. ಈ ವಿಚಾರವನ್ನು ನಾನು ಹೇಳಬೇಕೆಂದು, ಇವತ್ತು ನನಗೆ ಎಷ್ಟೇ ಕಷ್ಟವಾದರೂ ಕೂಡ ಸದನಕ್ಕೆ ಬಂದು ಹೇಳಿದ್ದೇನೆ. ನಾನು ಸದನದ ಸಮಯವನ್ನು ಹೆಚ್ಚು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ನನ್ನ ಭಾಷಣವನ್ನು ತಾವುಗಳೆಲ್ಲರೂ ಶಾಂತ ರೀತಿಯಿಂದ ಕೇಳಿದ್ದಕ್ಕಾಗಿ ತಮಗೆಲ್ಲರಿಗೂ ಆಭಾರಿಯಾಗಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ:- (ಮಂಡ್ಯ) ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೆ ಈ ಸದನದಲ್ಲಿ ಅನೇಕ ಮಾನ್ಯ ಸದಸ್ಯರುಗಳು ಕಾವೇರಿ ವಿವಾದದ ಬಗ್ಗೆ, ಕಾವೇರಿ ನೀರಿನ ಹಕ್ಕಿನ ಬಗ್ಗೆ ಕಾವೇರಿ ನೀರಿನ ಸಂರಕ್ಷಣೆಯ ಬಗ್ಗೆ ಮಾತನಾಡಿದ್ದಾರೆ. ನಾನಾದರೂ ಕೂಡ ಕಾವೇರಿ ಜಲಾನಯನ ಪ್ರದೇಶದಿಂದ ಬಂದಂಥ ವ್ಯಕ್ತಿಯಾಗಿ ಹೇಳುವುದೇನೆಂದರೆ, ನಮ್ಮ ಅನ್ನದಾತೆಯಾದ ಕಾವೇರಿ ನೀರಿನ ಹಕ್ಕನ್ನು ಸರ್ಕಾರ ಕಾಪಾಡಬೇಕು. ಈಗ ಅದರ ಬಗ್ಗೆ ತೆಗೆದುಕೊಂಡಿರುವ ಕ್ರಮಗಳನ್ನೂಮೀರಿ ಇನ್ನೂ ಹೆಚ್ಚಿನ ರೀತಿಯಲ್ಲಿ ರೈತರ ಹಿತವನ್ನು ಕಾಪಾಡಬೇಕೆಂದು ಸಮಸ್ತ ಕಾವೇರಿ ಜಲಾನಯನ ಪ್ರದೇಶದ ರೈತರಪರವಾಗಿ ಸರ್ಕಾರಕ್ಕೆ ಆಗ್ರಹಪೂರ್ವಕವಾಗಿ ಮನವಿ ಮಾಡುತ್ತೇನೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಕೈಗೊಂಡಿರುವ ಕಾಮಗಾರಿಗಳು, ಕಾರ್ಯಕ್ರಮಗಳು ನಿರೀಕ್ಷಿತ ರೀತಿಯಲ್ಲಿ ನಡೆಯದೇ ಇರತಕ್ಕದ್ದು ಎಲ್ಲಾ ಜನಪ್ರತಿನಿಧಿಗಳ ಆಳಲಾಗಿದೆ. ಆ ಒಂದು ಕಾಮಗಾರಿಯನ್ನು ಸರಿಯಾದಂಥ ವೇಳೆಯಲ್ಲಿ ಮುಗಿಸಲು ಸಮರೋಪಾದಿಯಲ್ಲಿ ಕೆಲಸವನ್ನು ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಆ ಕಾಮಗಾರಿಯ ಗುಣಮಟ್ಟವನ್ನೂ ಸಹ ಕಾಪಾಡುವಲ್ಲಿ ಆದ್ಯತೆಯನ್ನು ನೀಡಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕಾವೇರಿ ಜಲಾನಯನ ಪ್ರದೇಶದಲ್ಲಿನ ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣದ ಕೆಲಸವನ್ನು ಕೈಗೆತ್ತಿಕೊಂಡು ಸುಮಾರು14-15 ವರ್ಷಗಳಾಗಿದೆ. ಆದರೂ ಕೂಡ ಆ ಕೆಲಸ ಶೀಘ್ರಗತಿಯಲ್ಲಿ ಮುಗಿದಿಲ್ಲ. ಇದರಿಂದ ಪ್ರತಿವರ್ಷ ರೈತರಿಗೆ ನೀರಿನ ಕೊರತೆಯಾಗಿ ಬೆಳೆಯಲ್ಲಿ ನಷ್ಟವನ್ನು ಅನುಭವಿಸುತ್ತಿದ್ದಾರೆ. ಆದ್ದರಿಂದ ಆ ಒಂದು ಕೆಲಸ ಶೀಘ್ರವಾಗಿ ಆಗಬೇಕು. ಮತ್ತು ಕಾವೇರಿ ನೀರಿನ ವಿವಾದದ ಬಗ್ಗೆ ಇರುವ ಉನ್ನತಮಟ್ಟದ ಸಮಿತಿಯು ಕಡೆಯಪಕ್ಷ ತಿಂಗಳಿಗೆ ಒಂದು ಸಾರಿಯಾದರೂ ಸಭೆ ಸೇರಿ ಈ ವಿವಾದದಲ್ಲಿ ಏನು ಮುನ್ನಡೆ ಸಾಧನೆಯಾಗಿದೆ ಎಂಬ ಮಾಹಿತಿಯನ್ನು ಎಲ್ಲಾರಿಗೂ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸರ್ಕಾರ ಈ ಒಂದು ಕಾವೇರಿ ನೀರಿನ ಹಕ್ಕಿನ ರಕ್ಷಣೆಯ ಬಗ್ಗೆ ಈಗ ತೆಗೆದುಕೊಂಡಿರತಕ್ಕ ಕ್ರಮದ ಜೊತೆಗೆ ಇದನ್ನು ಇನ್ನೂ ಮಹತ್ವರವಾಗಿ ತೆಗೆದುಕೊಂಡು ಕಾರ್ಯಪ್ರವೃತ್ತರಾಗಬೇಕೆಂಬ ನಮ್ಮ ಭಾಗದ ಜನರ ಆಸೆಯನ್ನು ಈ ಸಭೆಯ ಮುಂದಿಡುತ್ತಿದ್ದೇನೆ. ಕಡೆಯದಾಗಿ, ಈ ಕಾವೇರಿ ವಿಚಾರದಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಈಗ ಸದನದ ಕಾರ್ಯಕಲಾಪಗಳನ್ನು ನಾಳೆ ಬೆಳಿಗ್ಗೆ 9-30ಕ್ಕೆ ಮುಂದೂಡಬಯಸುತ್ತೇನೆ.

(ಸದನವು 5-28 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ : 27-8-93ರ ಶುಕ್ರವಾರ ಬೆಳಿಗ್ಗೆ 9-30ಕ್ಕೆ ಸೇರಲು ನಿರ್ಧರಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)